# ಜೂಡಿತಳು

## ಮುನ್ನುಡಿ

ಅಸ್ಸೀರಿಯದ ಹೊಲೊಫರ್ನೆಸ್ ಎಂಬ ದಂಡನಾಯಕನು ಇಸ್ರಯೇಲ್ ನಾಡಿನ ಮೇಲೆ ಮಾಡಿದ ಆಕ್ರಮಣದಿಂದಾಗಿ ಯೆಹೂದ್ಯರು ದೊಡ್ಡ ಗಂಡಾಂತರಕ್ಕೆ ಸಿಕ್ಕಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ದೇವರು ಜೂಡಿತ್ ಎಂಬ ವೀರನಾರಿಮಣಿಯೊಬ್ಬಳನ್ನು ಆರಿಸಿ, ಆಕೆಯ ಮುಖಾಂತರ ಯೆಹೂದ್ಯರನ್ನು ರಕ್ಷಿಸುತ್ತಾರೆ. ಈಕೆ ಆಳವಾದ ಭಕ್ತಿವಿಶ್ವಾಸದಿಂದ ಕೂಡಿದ ಒಬ್ಬ ವಿಧವೆ, ಮೋಶೆಯ ಧರ್ಮಶಾಸ್ತ್ರವನ್ನು ಕೂಲಂಕುಷವಾಗಿ ಆಚರಿಸುತ್ತಿದ್ದ ವ್ಯಕ್ತಿ.

ಹೊಲೊಫರ್ನೆಸನ ಸಂಹಾರದ ನಂತರ ಜೂಡಿತ್ ದೇವರಿಗೆ ಮಾಡಿದ ಕೃತಜ್ಞತಾ ಗೀತೆಯೊಂದಿಗೆ ಈ ಗ್ರಂಥ ಮುಕ್ತಾಯಗೊಳ್ಳುತ್ತದೆ. ಐತಿಹಾಸಿಕ ಹಾಗೂ ಭೌಗೋಳಿಕ ವಿವರಗಳಿಗೆ ಹೆಚ್ಚು ಗಮನಕೊಡದೆ ಧಾರ್ಮಿಕತೆಯನ್ನೇ ಗುರಿಯಾಗಿಟ್ಟುಕೊಂಡು ರಚಿಸಿದ ಗ್ರಂಥ ಇದು. ಇದರ ಕಾಲ ಕ್ರಿ.ಪೂ. ಸುಮಾರು ಎರಡನೇ ಶತಮಾನದ ಮಧ್ಯ ಭಾಗ.

## ಪರಿವಿಡಿ


| | | | | |
|---|---|---|---|---|
| ಯೆಹೂದ್ಯರಿಗೆ ವಿನಾಶದ ಬೆದರಿಕೆ | – | 1.1 | – | 7.32 |
| ರಾಷ್ಟ್ರವನ್ನು ರಕ್ಷಿಸಿದ ಜೂಡಿತ್ | – | 8.1 | – | 14.19 |
| ಇಸ್ರಯೇಲರ ವಿಜಯ | – | 15.1 | – | 16.25 |


### ನೆಬೂಕದ್ನೆಚ್ಚರನು ಅರ್ಪಕ್ಷದನ ಮೇಲೆ ಮಾಡಿದ ಯುದ್ಧ

**1** ಅದು ನೆಬೂಕದ್ನೆಚ್ಚರನ ಆಳ್ವಿಕೆಯ ಹನ್ನೆರಡನೇ ವರ್ಷ. ಅವನು ನಿನೆವೆ ಮಹಾನಗರದಲ್ಲಿ ನೆಲೆಸಿ
ಅಸ್ಸೀರಿಯರನ್ನು ಆಳುತ್ತಾ ಇದ್ದನು. ಆಗ ಅರ್ಪಕ್ಷದನು ಎಕ್ಬತಾನ ಎಂಬ ನಗರದಲ್ಲಿದ್ದುಕೊಂಡು ಮೇದ್ಯರನ್ನು
ಆಳುತ್ತಾ ಇದ್ದನು. 2ಅರ್ಪಕ್ಷದನು ಎಕ್ಬತಾನ ನಗರದ ಸುತ್ತಲು ಕೋಟೆಯನ್ನು ಕಟ್ಟಿದ್ದನು. ಅದು ಇಪ್ಪತ್ತ
ಎರಡು ಮೀಟರ್ ದಪ್ಪ, ಮೂವತ್ತು ಮೀಟರ್ ಎತ್ತರವಿತ್ತು. ಈ ಕಟ್ಟಡಕ್ಕೆ ಬಳಸಲಾಗಿದ್ದ ಕಲ್ಲುಗಳು
ನೂರಮೂವತ್ತು ಸೆಂಟಿ ಮೀಟರ್ ದಪ್ಪ ಹಾಗೂ ಇನ್ನೂರ ಅರವತ್ತು ಸೆಂಟಿಮೀಟರ್ ಉದ್ದವಿದ್ದವು.
3ಕೋಟೆಯ ಪ್ರತಿಯೊಂದು ಬಾಗಿಲ ಬಳಿ ಗೋಪುರಗಳಿದ್ದವು. ಅವುಗಳ ಎತ್ತರ ನಲ್ವತ್ತನಾಲ್ಕು ಮೀಟರ್,
ಬುಡದಗಲ ಇಪ್ಪತ್ತಾರು ಮೀಟರ್. 4ಕೋಟೆ ಬಾಗಿಲುಗಳ ಗಾತ್ರ: ಮೂವತ್ತು ಮೀಟರ್ ಎತ್ತರ ಹಾಗೂ
ಹದಿನೆಂಟು ಮೀಟರ್ ಅಗಲ; ಈ ಬಾಗಿಲುಗಳ ಮೂಲಕ ಇಡೀ ಸೈನ್ಯ ಸುಲಭವಾಗಿ
ಹೋಗಿಬರಬಹುದಾಗಿತ್ತು; ರಾವುತರು ಸರಾಗವಾಗಿ ಅಡ್ಡಾಡಬಹುದಾಗಿತ್ತು.
5 ನೆಬೂಕದ್ನೆಚ್ಚರನು ಅರ್ಪಕ್ಷದನ ಮೇಲೆ ಯುದ್ಧಕ್ಕೆ ಹೊರಟನು. ಯುದ್ಧವು ರಾಜೆಸ್ಸಿನ
ಬಳಿಯಿರುವ ದೊಡ್ಡ ಬಯಲು ಪ್ರದೇಶದಲ್ಲಿ ನಡೆಯಿತು. 6ಮಲೆನಾಡಿನ ಅನೇಕ ರಾಷ್ಟ್ರಗಳು, ಯೂಫ್ರೆಟಿಸ್,
ಟೈಗ್ರಿಸ್ ಹಾಗು ಹೈದಾಸ್ ಪೆಸ್ ಇವುಗಳ ಕರಾವಳಿಯಲ್ಲಿದ್ದವರು ಮತ್ತು ಬಯಲು ಸೀಮೆಯಲ್ಲಿದ್ದು
ಏಲಾಮಿನ ಅರಸ ಅರ್ಯೋಕನಿಗೆ ಅಧೀನರಾಗಿದ್ದವರು, ಅರ್ಪಕ್ಷದನಿಗೆ ಬೆಂಬಲಿಗರಾದರು. ಹೀಗೆ
ಕಸ್ದೀಯರ ವಿರುದ್ಧ ಹೋರಾಡಲು ಅನೇಕ ರಾಷ್ಟ್ರಗಳು ಮುಂದಾದವು.
7 ಅಸ್ಸೀರಿಯರ ಅರಸ ನೆಬೂಕದ್ನೆಚ್ಚರನು ಹಲವಾರು ನಾಡುಗಳಿಗೆ ದೂತರನ್ನು ಕಳುಹಿಸಿದನು;
ಪರ್ಷಿಯದವರಿಗೆ, ಪಾಶ್ಚಾತ್ಯ ನಾಡಿನವರಿಗೆ, ಸಿಲಿಸಿಯಾ ಹಾಗು ದಮಸ್ಕಸ್‌ನವರಿಗೆ, ಲೆಬನೋನ್,

ಅಂತಿಲೆಬನೋನ್ ಹಾಗು ಸಮುದ್ರದ ಕರಾವಳಿಯಲ್ಲಿದ್ದವರಿಗೆ; 8ಕಾರ್ಮೆಲ್, ಗಿಲ್ಯಾದ್, ಉತ್ತರ ಗಲಿಲೇಯ ಮತ್ತು ಎಸ್ದ್ರಲೋನ್ ಮಹಾಬಯಲು ಸೀಮೆಯವರಿಗೆ; 9ಸಮಾರಿಯ ಹಾಗು ಅದರ ಸುತ್ತಮುತ್ತಲಿನ ಪಟ್ಟಣದವರಿಗೆ, ಜೋರ್ಡನ್ ನದಿಯ ಆಚೆ ಇರುವ ಜೆರುಸಲೇಮ್, ಬೆಥಾನಿಯಾ, ಚೆಲೂಸ್, ಕಾದೇಶ್ ಪಟ್ಟಣದವರಿಗೆ; ಈಜಿಪ್ಟ್ ನದಿತೀರದವರಿಗೆ, ತಾಫನೆಸ್, ರಮ್ಸೇಸ್ ಹಾಗು ಇಡಿ ಗೋಷೆನ್ ನಾಡಿನವರಿಗೆ ಕರೆಕಳುಹಿಸಿದನು; 10ಅಷ್ಟು ಮಾತ್ರವಲ್ಲ, ಟಾನಿಸಿನ ಆಚೆಕಡೆಗೆ, ಮೆಂಫಿಸ್‍ವರೆಗೆ, ಈಜಿಪ್ಟಿನಲ್ಲಿದ್ದ ಎಲ್ಲರಿಗೆ ಮತ್ತು ಎಥಿಯೋಪಿಯಾದ ಎಲ್ಲೆಗಳಲ್ಲಿದ್ದವರಿಗೆ ದೂತರನ್ನು ಕಳುಹಿಸಿ ಸಹಾಯಕ್ಕೆ ಬರಬೇಕೆಂದು ಕೋರಿದನು. 11ಆದರೆ ಈ ದೇಶಗಳ ನಿವಾಸಿಗಳೆಲ್ಲರೂ ಅಸ್ಸೀರಿಯರ ಅರಸ ನೆಬೂಕದ್ನೆಚ್ಚರನ ಕರೆಗೆ ಓಗೊಡದೆ ಹೋದರು. ಅವನೊಂದಿಗೆ ಸೇರಿ ಯುದ್ಧಮಾಡಲು ನಿರಾಕರಿಸಿದರು. ಅವರ ದೃಷ್ಟಿಯಲ್ಲಿ ಅವನು ಒಬ್ಬಂಟಿಗನಾಗಿ ಕಂಡನು. ಅವನಿಗೆ ಯಾರೂ ಭಯಪಡಲಿಲ್ಲ. ಅವನ ರಾಯಭಾರಿಗಳನ್ನು ಬರೀ ಕೈಯಲ್ಲಿ ಹಿಂದಕ್ಕೆ ಅಟ್ಟಿ ಅವಮಾನಗೊಳಿಸಿದರು.

12 ನೆಬೂಕದ್ನೆಚ್ಚರನು ಅವರೆಲ್ಲರ ಮೇಲೆ ಉಗ್ರಕೋಪಗೊಂಡನು. ಸಿಲಿಸಿಯಾ, ದಮಸ್ಕಸ್ ಹಾಗು ಸಿರಿಯಾ ನಾಡುಗಳ ಮೇಲೆ ಸೇಡುತೀರಿಸಿಕೊಳ್ಳುವುದಾಗಿ ಶಪಥಮಾಡಿದನು; ಮೋವಾಬ್, ಅಮ್ಮೋನ್, ಸಮಸ್ತ ಜುದೇಯ ಮತ್ತು ಈಜಿಪ್ಟ್ ಇವುಗಳಲ್ಲಿರುವ ಎಲ್ಲರನ್ನು ಒಂದು ಸಮುದ್ರದಿಂದ ಇನ್ನೊಂದು ಸಮುದ್ರದವರೆಗೆ ಇರುವವರನ್ನು ಕತ್ತಿಗೆ ತುತ್ತಾಗಿಸುವುದಾಗಿ ತನ್ನ ಸಿಂಹಾಸನದ ಮೇಲೆ ಹಾಗು ರಾಜ್ಯದ ಮೇಲೆ ಆಣೆಯಿಟ್ಟು ಶಪಥಮಾಡಿದನು.

### ಅರ್ಫಕ್ಷದನ ವಿರುದ್ಧ ದಾಳಿ

13 ತನ್ನ ಆಳ್ವಿಕೆಯ ಹದಿನೇಳನೇ ವರ್ಷದಲ್ಲಿ ನೆಬೂಕದ್ನೆಚ್ಚರನು ಅರಸ ಅರ್ಫಕ್ಷದನ ಮೇಲೆ ದಾಳಿಮಾಡಿ ಸೋಲಿಸಿದನು. ಅವನ ಇಡೀ ಸೈನ್ಯವನ್ನು, ರಾಹುತರನ್ನು ಹಾಗೂ ರಥಗಳನ್ನು ಧ್ವಂಸ ಮಾಡಿದನು. 14ಅವನ ನಗರಗಳನ್ನೆಲ್ಲ ಆಕ್ರಮಿಸಿಕೊಂಡು, ಎಕ್ಬತಾನಕ್ಕೆ ಬಂದು ಅದರ ಗೋಪುರಗಳನ್ನು ವಶಪಡಿಸಿಕೊಂಡು, ಅದರ ಸಂತೆ ಪೇಟೆಗಳನ್ನು ಲೂಟಿಮಾಡಿದನು. ಆ ನಗರದ ವೈಭವವನ್ನೆಲ್ಲಾ ವಿಪರ್ಯಾಸಕ್ಕೆ ಗುರಿ ಮಾಡಿದನು. 15ರಾಜೆಸ್ಸಿನ ಗುಡ್ಡಗಳಲ್ಲಿ ಅರ್ಫಕ್ಷದನನ್ನು ಸೆರೆ ಹಿಡಿದು, ಭರ್ಜಿಯಿಂದ ತಿವಿದು, ಒಮ್ಮೆಗೇ ಅವನನ್ನು ಮುಗಿಸಿಬಿಟ್ಟನು.

16 ತರುವಾಯ ನೆಬೂಕದ್ನೆಚ್ಚರನು ತನ್ನ ಸೈನ್ಯಸಮೇತ ಹಾಗೂ ಬೆಂಬಲಿಗರೊಂದಿಗೆ ನಿನೆವೆಗೆ ಹಿಂದಿರುಗಿದನು; ಸೈನ್ಯ ತಂಡೋಪ ತಂಡವಾಗಿತ್ತು; ಅಲ್ಲೇ ಅವನೂ ಅವನ ಸೈನ್ಯ ಸ್ತೋಮವೂ ದುಂದೌಣದಲ್ಲಿ ನೂರಿಪ್ಪತ್ತು ದಿನಗಳನ್ನು ಕಳೆದರು.

### ಪಶ್ಚಿಮದಲ್ಲಿ ದಂಡಯಾತ್ರೆ

**2** ಹದಿನೆಂಟನೇ ವರ್ಷದ ಮೊದಲನೇ ತಿಂಗಳ 22ನೇ ದಿನ ಅಸ್ಸೀರಿಯರ ಅರಸ ನೆಬೂಕದ್ನೆಚ್ಚರನ ಅರಮನೆಯಲ್ಲಿ ಒಂದು ಸುದ್ದಿ ಹಬ್ಬಿತು. ಈ ಮೊದಲೇ ಶಪಥಮಾಡಿದಂತೆ, ಅರಸನಿಗೆ ಬೆಂಬಲ ನೀಡದ ಎಲ್ಲ ದೇಶಗಳ ಮೇಲೆ ಸೇಡನ್ನು ತೀರಿಸಿಕೊಳ್ಳುವುದು ಖಂಡಿತ ಎಂದು ತಿಳಿದುಬಂದಿತು. 2ಅರಸನು ತನ್ನ ಮಂತ್ರಿ ಮಂಡಲದವರನ್ನೂ ಹಿರಿಯ ದಳಪತಿಗಳನ್ನೂ ಕರೆಸಿ, ಗುಟ್ಟಾಗಿ ಸಮಾಲೋಚನೆ ನಡೆಸಿದನು. ತನಗೆ ಬೆಂಬಲ ನೀಡದ ದೇಶಗಳನ್ನು ಸಂಪೂರ್ಣವಾಗಿ ನಾಶಗೊಳಿಸಲು ತೀರ್ಮಾನಿಸಿರುವುದಾಗಿ ಅರಸನು ಅವರಿಗೆ ಖುದ್ದಾಗಿ ತಿಳಿಸಿದನು. 3ಅರಸನ ಬೇಡಿಕೆಗಳನ್ನು ನಿರಾಕರಿಸಿದ ಎಲ್ಲರನ್ನೂ ಸಂಹರಿಸಬೇಕೆಂದು ರಾಜಾಜ್ಞೆ ಹೊರಡಿಸಲಾಯಿತು.

4 ಈ ಗುಪ್ತ ಸಮಾಲೋಚನೆ ನಡೆದ ಬಳಿಕ ಅಸ್ಸೀರಿಯದ ಅರಸ ನೆಬೂಕದ್ನೆಚ್ಚರನು ತನಗೆ ಮಾತ್ರ ಅಧೀನನಾಗಿದ್ದ ಪ್ರಧಾನ ಸೇನಾಧಿಪತಿ ಹೊಲೊಫರ್ನೆಸ್ ಎಂಬವನನ್ನು ಕರೆಸಿದನು. ಅವನಿಗೆ, "ಸಮಸ್ತ ಜಗತ್ತಿನ ಒಡೆಯನಾದ ರಾಜಾಧಿರಾಜನ ಆಜ್ಞೆಯಿದು: 5ಹೊರಡು, ಎದೆಕುಂದದೆ ಯುದ್ಧಮಾಡು. ವೀರ ಪ್ರವೀಣರನ್ನು ಆಯ್ದುಕೊ. 120 ಸಾವಿರ ಸೈನಿಕರನ್ನೂ 12 ಸಾವಿರ ರಾಹುತರನ್ನೂ ಆರಿಸಿಕೊಂಡು 6ನನ್ನ

ಕರೆಯನ್ನು ತಿರಸ್ಕರಿಸಿದ ಪಶ್ಚಿಮ ದೇಶಗಳ ಮೇಲೆ ಧಾಳಿಮಾಡು. 7ನೆಲಜಲ ಮುಂತಾದ ಮೂಲಭೂತ ಪದಾರ್ಥಗಳನ್ನು ಸಜ್ಜುಗೊಳಿಸುವಂತೆ ಸೈನಿಕರಿಗೆ ಆಜ್ಞಾಪಿಸು. ಏಕೆಂದರೆ, ನಾನು ರೌದ್ರಾವೇಶನಾಗಿ ಆ ನಾಡುಗಳನ್ನೆಲ್ಲ ಆಕ್ರಮಿಸಿಕೊಳ್ಳುವೆ. ನನ್ನ ಸೈನ್ಯ ಧರೆಯೆಲ್ಲವನ್ನೂ ಮುತ್ತಿಕೊಳ್ಳುವುದು. ನಾನು ಸರ್ವವನ್ನೂ ಸೂರೆ ಮಾಡುವೆನು. 8ಕಣಿವೆಗಳೂ ಸರೋವರಗಳೂ ಗಾಯಗೊಂಡ ಶತ್ರುಗಳಿಂದ ತುಂಬಿಹೋಗುವುವು. ನದಿಗಳು ಸತ್ತವರ ಶವಗಳಿಂದ ತುಂಬಿ ಹರಿಯುವುವು. ಭೂಮಿಯ ಕಟ್ಟಕಡೆಯವರೆಗೆ ಶತ್ರುಗಳು ಸೆರೆಹೋಗುವಂತೆ ಮಾಡುವೆನು.

9 "ಈಗ ಹೊರಡು; ನನಗಾಗಿ ಇಡೀ ಪ್ರಾಂತ್ಯವನ್ನು ಆಕ್ರಮಿಸಿಕೊ. 10ಶರಣಾಗತರಾದವರನ್ನು ಸೆರೆಯಲ್ಲಿಡು. ನಾನು ಬಂದು ಅವರನ್ನು ಶಿಕ್ಷಿಸುತ್ತೇನೆ. 11ಎದುರಿಸುವಂಥವರಾರಿಗೂ ಕರುಣೆ ತೋರಿಸಬೇಕಾಗಿಲ್ಲ. ಎಲ್ಲರನ್ನು ಖಡ್ಗದಿಂದ ಹತಮಾಡು. ನಿನಗೆ ವಹಿಸಿಕೊಟ್ಟ ಪ್ರದೇಶವನ್ನೆಲ್ಲ ಕೊಳ್ಳೆಹೊಡೆ. 12ನನ್ನ ಜೀವದಾಣೆ, ನನ್ನ ಸಜೀವ, ಸಶಕ್ತ ರಾಜ್ಯದ ಮೇಲೆ ಪ್ರಯಾಣ ಮಾಡಿ ಇದ್ದೇನೆ. ನನ್ನ ಭುಜ ಬಲದಿಂದ ಇದನ್ನೆಲ್ಲ ಈಡೇರಿಸುವೆನು. 13ನೀನಾದರೋ ನಿನ್ನ ಪ್ರಭುವಿನ ಆಜ್ಞೆಗಳನ್ನು ಚಾಚೂ ತಪ್ಪದೆ ಈಡೇರಿಸಬೇಕು. ತಡಮಾಡಬೇಡ. ನಾನು ಹೇಳಿದಂತೆ ಕಟ್ಟುನಿಟ್ಟಾಗಿ ಮಾಡು," ಎಂದನು.

## ಯುದ್ಧಕ್ಕೆ ಸಿದ್ಧತೆ

14 ಅರಸನ ಸನ್ನಿಧಿಯಿಂದ ಹೊರಟುಬಂದ ಹೊಲೊಫರ್ನೆಸ್ ದಂಡನಾಯಕರನ್ನೂ ದಳಪತಿಗಳನ್ನೂ ಅಸ್ಸೀರಿಯ ಸೈನ್ಯದ ವಿವಿಧ ಅಧಿಕಾರಿಗಳನ್ನೂ ಕರೆಸಿದನು. 15ಒಡೆಯನ ಆಜ್ಞಾನುಸಾರವಾಗಿ ಶೂರ ಸೈನಿಕರನ್ನು ಎಚ್ಚರಿಕೆಯಿಂದ ಆರಿಸಿಕೊಂಡನು. 16ಸುಮಾರು 120 ಸಾವಿರ ಸೈನಿಕರು, 12 ಸಾವಿರ ರಾಹುತರು ಬಿಲ್ಲು ಬಾಣಗಳೊಂದಿಗೆ ಕಾಳಗಕ್ಕೆ ಸುಸಜ್ಜಿತರಾಗುವಂತೆ ಮಾಡಿದನು. 17ಸಾಮಾನು ಸರಂಜಾಮುಗಳನ್ನು ಸಾಗಿಸಲು ಅಸಂಖ್ಯಾತ ಒಂಟೆಗಳು, ಕುದುರೆಗಳು, ಕತ್ತೆಗಳು, ಹಾಗೂ ಆಹಾರಕ್ಕಾಗಿ ಕುರಿ ಮೇಕೆಗಳು, ಹೋತಹೋರಿಗಳು ಸಿದ್ಧವಾದವು. 18ಇನ್ನೂ ಹೆಚ್ಚಿನ ಅವಶ್ಯಕತೆಗಳಿಗಾಗಿ ಪ್ರತಿ ಒಬ್ಬನಿಗೂ ಬೆಳ್ಳಿ ಬಂಗಾರವನ್ನು ರಾಜನ ಭಂಡಾರದಿಂದ ಕೊಡಲಾಯಿತು.

19 ಅರಸ ನೆಬೂಕದ್ನೆಚರನಿಗೆ ಮುಂದಾಳಾಗಿ ಹೊಲೊಫೆರ್ನೆಸ್ ತನ್ನ ಸೈನ್ಯದೊಂದಿಗೆ ಪಶ್ಚಿಮ ಪ್ರಾಂತ್ಯವನ್ನೆಲ್ಲಾ ಆಕ್ರಮಿಸಿಕೊಳ್ಳಲು ಹೊರಟನು. ರಾಹುತರು, ರತಗಳು, ಆಯ್ಕೆಯಾದ ಕಾಲಾಳುಗಳು – ಎಲ್ಲರು ಅವನೊಂದಿಗೆ ಹೋದರು. 20ಅವನನ್ನು ಹಿಂಬಾಲಿಸಿದ ಇತರರು ಮಿಡತೆಗಳ ದಂಡಿನಂತೆ, ಸಮುದ್ರದ ಉಸುಬಿನಂತೆ ಕಂಡರು. ಅವರನ್ನು ಎಣಿಕೆಮಾಡಲು ಯಾರಿಂದಲೂ ಆಗುತ್ತಿರಲಿಲ್ಲ.

## ಹಂತಹಂತವಾಗಿ ಹಾಕಿದ ಮುತ್ತಿಗೆ

21 ಹೀಗೆ ಅವರು ನಿನೆವೆಯಿಂದ ಹೊರಟು ಮೂರು ದಿನಗಳ ಪ್ರಯಾಣ ಮಾಡಿ ಬೆಕ್ತಿಲೀತ್ ಬಯಲನ್ನು ಸೇರಿದರು. ಅಲ್ಲಿಂದ ಉತ್ತರಕ್ಕೆ ಸಿಲಿಸಿಯಾದ ಗುಡ್ಡದ ಬಳಿ ಡೇರೆಗಳನ್ನು ಹಾಕಿದರು. 22ಕಾಲಾಳು, ರಾಹುತರು ಮತ್ತು ರಥಗಳೊಂದಿಗೆ ಕೂಡಿದ ಇಡೀ ಸೈನ್ಯದೊಂದಿಗೆ ಹೊಲೊಫರ್ನೆಸನು ಮಲೆನಾಡಿಗೆ ಸಾಗಿದನು. 23ಪುಟ್ ಮತ್ತು ಲೂದ್ ಮಾರ್ಗವಾಗಿ ಹೋಗಿ ಸಿಯೋನಿನ ದಕ್ಷಿಣ ವಿಭಾಗದ ಮರುಭೂಮಿಯ ಅರುಗಿನಲ್ಲಿದ್ದ ರಾಸಿಸ್ ಹಾಗು ಇಷ್ಮಾಯೇಲ್ ಅವರ ಮಕ್ಕಳನ್ನು ಸೆರೆಹಿಡಿದನು.

24 ಅಲ್ಲಿಂದ ಯೂಫ್ರೆಟಿಸ್ ಬದಿಯಲ್ಲಿ ಸಾಗುತ್ತಾ ಮೆಸಪಟೋಮಿಯಾವನ್ನು ದಾಟಿದನು. ಅಲ್ಲಿದ್ದ ಅಬ್ರೋನ್ ನದಿಯ ಸರಹದ್ದಿನಲ್ಲಿದ್ದ ಕೋಟೆಗಳನ್ನು ನೆಲಸಮಮಾಡಿ, ಸಮುದ್ರ ತೀರವನ್ನು ಸೇರಿದನು. 25ಅನಂತರ ಸಿಲಿಸಿಯಾದ ಪ್ರಾಂತ್ಯಗಳನ್ನು ಮುತ್ತಿ, ಹೋರಾಟಕ್ಕೆ ಬಂದವರನ್ನೆಲ್ಲ ಸಂಹರಿಸಿದನು. ಅರೇಬಿಯಾಭಿ ಮುಖವಾಗಿರುವ ಜಾಫೇತಿನ ದಕ್ಷಿಣ ಸೀಮೆಗಳ ಮೂಲಕ ಸಾಗುತ್ತಾ ಮಿದ್ಯಾನರನ್ನು ಸುತ್ತುಗಟ್ಟಿದನು. ಅವರ ಗುಡಾರಗಳನ್ನು ಸುಟ್ಟುಹಾಕಿ, 26ಅವರ ಕುರಿ ಮಂದೆಗಳನ್ನು ದೋಚಿಕೊಂಡು, ದಮಸ್ಕಸ್ಸಿನ ಬಯಲಿಗೆ ಇಳಿದನು.

27 ಅದು ಗೋದಿಯ ಸುಗ್ಗಿಕಾಲವಾಗಿತ್ತು. ಹೊಲೊಫರ್ನೆಸ್ ಆ ಹೊಲಗದ್ದೆಗಳಿಗೆ ಬೆಂಕಿಯಿಟ್ಟು, ದನಕರುಗಳನ್ನೂ ಕುರಿಮಂದೆಗಳನ್ನೂ ನಾಶಮಾಡಿದನು. ನಗರಗಳು ನೆಲಸಮವಾದವು, ಗ್ರಾಮಗಳು

ನಿರ್ಜನ ಪ್ರದೇಶಗಳಾದವು, ಯುವಕರೆಲ್ಲ ಕತ್ತಿಗೆ ತುತ್ತಾದರು. 28ಸಮುದ್ರತೀರದ ಸಿದೋನ್, ಟೈರ್, ಸೂರ್, ಬಸಿಯಾನ ಮತ್ತು ಜಮ್ನಿಯಾ ಮುಂತಾದ ಊರುಗಳ ಜನರು ಭಯಭ್ರಾಂತರಾದರು; ಅಜೋತೊಸ್ ಮತ್ತು ಅಷ್ಕಲೋನ್ ಜನರು ತಲ್ಲಣಗೊಂಡರು.

### ಸಂಧಾನಕ್ಕೆ ಪ್ರಯತ್ನ

**3** ಆದ್ದರಿಂದ ಈ ಎಲ್ಲಾ ನಾಡಿನವರು ರಾಯಭಾರಿಗಳನ್ನು ಹೊಲೊಫರ್ನೆಸನ ಬಳಿಗೆ ಕಳುಹಿಸಿದರು. 2ಇವರು ಬಂದು, "ಮಹಾರಾಜ ನೆಬೂಕದ್ನೆಚ್ಚರವರ ದಾಸರು ನಾವು; ನಿಮಗೆ ಅಡ್ಡಬೀಳುತ್ತೇವೆ. ತಮ್ಮ ಇಚ್ಛಾನುಸಾರ ನಮಗೆ ಏನು ಬೇಕಾದರೂ ಮಾಡಬಹುದು. 3ಇದೋ, ನಮ್ಮ ಹುಲ್ಲುಗಾವಲುಗಳು, ಬೆಳೆ ತುಂಬಿದ ಹೊಲಗದ್ದೆಗಳು, ದನಕರುಗಳು, ಆಡು ಮೇಕೆಗಳು, ನಮ್ಮ ಸ್ವತ್ತನೆಲ್ಲವನ್ನು ನಿಮಗೆ ಒಪ್ಪಿಸುತ್ತೇವೆ. ನಿಮಗೆ ಇಷ್ಟಬಂದಂತೆ ಉಪಯೋಗಿಸಿಕೊಳ್ಳಬಹುದು. 4ನಮ್ಮ ಪಟ್ಟಣಗಳು, ಅವುಗಳ ನಿವಾಸಿಗಳು ಸಹ ನಿಮ್ಮ ಸೇವೆಗೆ ಮೀಸಲಾಗಿವೆ. ನಿಮಗೆ ಉಚಿತವಾಗಿ ಕಂಡಂತೆ ಬಳಸಿಕೊಳ್ಳಬಹುದು," ಎಂದು ತಿಳಿಸಿದರು.

5 ಮೇಲ್ಕಂಡ ವರದಿಯನ್ನು ಕೇಳಿದನಂತರ ಹೊಲೊಫರ್ನೆಸ್ ಮಹಾ ಠೀವಿಯಿಂದ ಸೈನ್ಯದೊಂದಿಗೆ ಹೊರಟನು. ಗುಡ್ಡದಿಂದ ಇಳಿದು ಕರಾವಳಿಯ ಕಡೆ ಹೋದನು. 6ದಾರಿಯಲ್ಲಿ ಕೋಟೆಗಳ ಕಾವಲಾಗಿ ಪಡೆಗಳನ್ನು ಇರಿಸಿದನು. ಸಹಾಯಪಡೆಗೆಂದು ಶೂರರಾದ ಸೈನಿಕರನ್ನು ಆರಿಸಿಕೊಂಡನು. 7ಅಲ್ಲಿನ ನಗರಗಳ ಹಾಗೂ ಪಟ್ಟಣಗಳ ನಿವಾಸಿಗಳು ಪುಷ್ಪಹಾರಗಳೊಂದಿಗೆ, ವಾದ್ಯಸಂಗೀತದೊಂದಿಗೆ ಅವನನ್ನು ಸ್ವಾಗತಿಸಿದರು. 8ಆದರೆ ಅವನು ಅವರ ಪುಣ್ಯಕ್ಷೇತ್ರಗಳನ್ನು ನೆಲಸಮಮಾಡಿದನು. ಪೂಜಾಮರಗಳನ್ನು ಕಡಿದು ಹಾಕಿದನು. ನಾಡುದೇವತೆಗಳನ್ನು ತೆಗೆದುಹಾಕಿದನು. ಹೀಗೆ ಸರ್ವರಾಷ್ಟ್ರಗಳ ಎಲ್ಲಾ ಭಾಷೆಗಳಾಡುವವರು ಹಾಗೂ ಇತರ ಜನಾಂಗದವರು ನೆಬೂಕದ್ನೆಚ್ಚರನನ್ನೇ ದೇವರೆಂದು ಪೂಜಿಸಬೇಕು ಎಂಬ ರಾಜಾಜ್ಞೆಯನ್ನು ಅಕ್ಷರಶಃ ಈಡೇರಿಸಿದನು.

9 ಈಪರಿ ಸಾಗುತ್ತಾ ಎಸ್ದ್ರಲೋನಿನ ಗಡಿಯ ಬಳಿ, ಅಂದರೆ ಜುದೇಯ ಪರ್ವತಶ್ರೇಣಿಗೆ ಎದುರಾಗಿದ್ದ ದೋತಾನ್ ಎಂಬ ಗ್ರಾಮದ ಅರುಗಿನಲ್ಲಿ ಸೇರಿದನು. 10ಅಲ್ಲಿ ಗೆಬಾ ಮತ್ತು ಶಿತೋಪೊಲಿಸಿನ ಮಧ್ಯೆ ದಂಡಿಳಿಸಿದನು. ಸೈನ್ಯದಳಗಳೆಲ್ಲವನ್ನು ವ್ಯವಸ್ಥಿತವಾಗಿ ಒಂದುಗೂಡಿಸುವ ಸಲುವಾಗಿ ಒಂದು ತಿಂಗಳವರೆಗೆ ಅಲ್ಲಿಯೇ ತಂಗಿದ್ದನು.

### ಎಚ್ಚರಗೊಂಡ ಜುದೇಯ

**4** ಜುದೇಯ ನಾಡಿನಲ್ಲಿ ವಾಸವಾಗಿದ್ದ ಇಸ್ರಯೇಲರು ಈ ಸುದ್ದಿಯನ್ನು ಕೇಳಿ ಹೊಲೊಫರ್ನೆಸನಿಗೆ ಬಹುವಾಗಿ ಅಂಜಿದರು. 2ಅಸ್ಸೀರಿಯದ ಅರಸ ನೆಬೂಕದ್ನೆಚ್ಚರನ ಪ್ರಧಾನ ಸೇನಾನಿ ಹೊಲೊಫರ್ನೆಸನು ಇತರ ರಾಷ್ಟ್ರಗಳಿಗೂ ಅವುಗಳ ದೇವಾಲಯಗಳಿಗೂ ಮಾಡಿದಂತೆ ಜೆರುಸಲೇಮಿಗೂ ತಮ್ಮ ಸರ್ವೇಶ್ವರನಾದ ದೇವರ ಮಹಾಲಯಕ್ಕೂ ಮಾಡುವನೆಂದು ಎಣಿಸಿ ನಡುಗಿದರು. 3ಹೊರನಾಡುಗಳಿಗೆ ಗಡೀಪಾರಾಗಿ ಹೋಗಿ ಬಂದು ಅವರು ಕೆಲವೇ ದಿನಗಳಾಗಿದ್ದವು. ಅವರು ಜುದೇಯಕ್ಕೆ ಹಿಂದಿರುಗಿ ಬಂದು, ಒಟ್ಟಿಗೆ ಅಲ್ಲಿ ನೆಲೆಗೊಂಡರು. ಅಪವಿತ್ರಗೊಳಿಸಲಾಗಿದ್ದ ಮಹಾದೇವಾಲಯವನ್ನು ಪುನಃ ಕಟ್ಟಿ, ಗರ್ಭಗುಡಿಯನ್ನು ಪ್ರತಿಷ್ಠಾಪಿಸಿದರು. ಇವು ಇತ್ತೀಚೆಗೆ ತಾನೇ ನಡೆದ ಘಟನೆಗಳಾಗಿದ್ದವು.

4 ಎಂತಲೇ, ಅವರು ಸಮಾರಿಯ ಮತ್ತು ಸುತ್ತುಮುತ್ತಲಿನ ಊರುಗಳಾದ ಕೋನಾ, ಬೆತ್-ಹೊರೊನ್, ಬಿಲ್‌ಮಯಿನ್, ಜೆರಿಕೊ, ಚೋಬಾ, ಎಸೋರಾ ಮತ್ತು ಸಾಲಿಂ ಕಣಿವೆ ಇವುಗಳಲ್ಲಿದ್ದವರನ್ನೂ ಎಚ್ಚರಿಸಿದರು. 5ಎತ್ತರವಾದ ಬೆಟ್ಟಗಳ ತುದಿಗಳನ್ನು ಏರಿಹೋಗಿ, ಅಲ್ಲಿನ ಊರುಗಳನ್ನು ಭದ್ರಗೊಳಿಸಿದರು. ಆಗ ತಾನೇ ಕೊಯಿಲು ಮುಗಿದಿದ್ದರಿಂದ ದವಸಧಾನ್ಯಗಳನ್ನು ಸಂಗ್ರಹಿಸಿ, ಯುದ್ಧಕಾಲಕ್ಕೆ ಬೇಕಾದ ಆಹಾರ ಸಾಮಗ್ರಿಗಳನ್ನು ದಾಸ್ತಾನು ಮಾಡಿಕೊಂಡರು.

6 ಆಗ ಜೆರುಸಲೇಮಿನಲ್ಲಿದ್ದ ಪ್ರಧಾನ ಯಾಜಕನಾದ ಯೊವಾಕಿಂ ದೋತಾನ್ ಬಯಲಿನ ಕಡೆ ಇದ್ದ ಎಸ್ದ್ರಲೊನ್ ನಾಡಿಗೆ ಎದುರಾಗಿದ್ದ ಬೆಥೂಲಿಯ ಮತ್ತು ಬಿತೊಮಸ್ತಾಯಿಮ್ ಪಟ್ಟಣಗಳ ನಿವಾಸಿಗಳಿಗೆ

ಈ ಸಮಾಚಾರವನ್ನು ಬರೆದು ಕಳುಹಿಸಿದನು. 7ಜುದೇಯವನ್ನು ಪ್ರವೇಶಿಸಲು ಸಂದುಗಳಿದ್ದ ಕಣಿವೆಗಳನ್ನು ಭದ್ರಪಡಿಸಿದನು. ಆ ಸಂದುಗಳು ಎಷ್ಟು ಇಕ್ಕಟ್ಟಾಗಿದ್ದವು ಎಂದರೆ, ಇಬ್ಬಿಬ್ಬರು ಮಾತ್ರ ಒಮ್ಮೆಗೆ ಹಾದು ಹೋಗಲು ಸಾಧ್ಯವಾಗಿತ್ತು. ಅಂಥ ದಾರಿಯಲ್ಲಿ ಶತ್ರುಗಳನ್ನು ಸುಲಭವಾಗಿ ತಡೆಗಟ್ಟುವಂತೆ ಸೈನಿಕರನ್ನು ಕಾವಲಿರಿಸಿದನು. 8ಹೀಗೆ ಪ್ರಧಾನ ಯಾಜಕ ಯೊವಾಕಿಂ ಮತ್ತು ಜೆರುಸಲೇಮಿನ ಪ್ರಮುಖರ ಆಲೋಚನಾ ಮಂಡಳಿಯ ಆಜ್ಞೆಯ ಪ್ರಕಾರ ಜುದೇಯದ ಜನರು ಎಲ್ಲವನ್ನೂ ಮಾಡಿದರು.

## ರಾಷ್ಟ್ರೀಯ ಪ್ರಾರ್ಥನಾಕೂಟ

9 ಇಸ್ರಯೇಲಿನ ಜನರೆಲ್ಲರೂ ಬಹು ದೈನ್ಯದಿಂದ ಮತ್ತು ಶ್ರದ್ಧೆಯಿಂದ ದೇವರಲ್ಲಿ ಮೊರೆ ಇಟ್ಟರು. 10ಹೆಂಗಸರು, ಮಕ್ಕಳು, ದನಕರುಗಳು, ಅಲ್ಲಿ ವಾಸವಾಗಿದ್ದ ಪರಕೀಯರು, ಕೂಲಿ ಆಳುಗಳು, ದಾಸದಾಸಿಯರು ಎಲ್ಲರೂ ತಪಶ್ಚರ್ಯೆಯ ಸೂಚನೆಯಾಗಿ ಗೋಣಿತಟ್ಟನ್ನು ಸುತ್ತಿಕೊಂಡರು. 11ಜೆರುಸಲೇಮಿನಲ್ಲಿದ್ದ ಇಸ್ರಯೇಲರೆಲ್ಲರು, ಹೆಂಗಸರು ಮಕ್ಕಳು ಎನ್ನದೆ, ಎಲ್ಲರೂ ಮಹಾದೇವಾಲಯದ ಮುಂದೆ ಸಾಷ್ಟಾಂಗವೆರಗಿದರು. ಹಣೆಗೆ ವಿಭೂತಿಯನ್ನು ಹಚ್ಚಿಕೊಂಡರು. ಕರಗಳನ್ನೆತ್ತಿ ದೇವರಿಗೆ ಪ್ರಾರ್ಥನೆ ಮಾಡಿದರು. 12ಬಲಿಪೀಠಕ್ಕೂ ಗೋಣಿತಟ್ಟನ್ನು ಸುತ್ತಿ, ದೇವರಿಗೆ ಮೊರೆಯಿಟ್ಟು, "ಶತ್ರುಗಳು ನಮ್ಮ ಮಕ್ಕಳನ್ನು ಎಳೆದುಕೊಂಡು ಹೋಗದಿರಲಿ. ನಮ್ಮ ಹೆಂಡತಿಯರನ್ನು ಕೊಳ್ಳೆಯಂತೆ ಹಂಚಿಕೊಳ್ಳದಿರಲಿ. ನಮ್ಮ ಸೊತ್ತಾದ ಪಟ್ಟಣಗಳನ್ನು ನಾಶಗೊಳಿಸದಿರಲಿ. ನಮ್ಮ ಮಹಾದೇವಾಲಯವನ್ನು ಹೊಲೆಗೆಡಿಸಿ, ಭ್ರಷ್ಟಗೊಳಿಸಿ, ಅನ್ಯಧರ್ಮೀಯರು ಕೊಚ್ಚಿಕೊಳ್ಳದಂತೆ ಕಾಪಾಡಿರಿ," ಎಂದು ವಿನಯದಿಂದಲೂ ಶ್ರದ್ಧೆಯಿಂದಲೂ ಬೇಡಿಕೊಂಡರು. 13ಸರ್ವೇಶ್ವರಸ್ವಾಮಿ ಅವರ ಪ್ರಾರ್ಥನೆಯನ್ನು ಆಲಿಸಿದರು. ಅವರ ಸಂಕಟವನ್ನು ಕಂಡು ಕರುಣೆ ತೋರಿದರು.

ಜೆರುಸಲೇಮಿನಲ್ಲಿ ಮಾತ್ರವಲ್ಲ, ಜುದೇಯದಲ್ಲೆಲ್ಲಾ ಜನರು ಸರ್ವಶಕ್ತ ದೇವರ ಪವಿತ್ರ ಸ್ಥಾನದ ಮುಂದೆ ಬಹಳ ದಿನಗಳವರೆಗೂ ಉಪವಾಸವ್ರತ ಕೈಗೊಂಡರು. 14ಪ್ರಧಾನ ಯಾಜಕ ಯೊವಾಕಿಂ ಹಾಗು ದೇವರ ಪೀಠದ ಮುಂದೆ ನಿಂತಿದ್ದ ಯಾಜಕರು ಮತ್ತು ಪರಿಚಾರಕರು ನಡುವಿಗೆ ಗೋಣಿತಟ್ಟನ್ನು ಕಟ್ಟಿಕೊಂಡು ದಹನ ಬಲಿಗಳನ್ನು ಅರ್ಪಿಸಿದರು; ಹರಕೆಗಳನ್ನೂ ಕಾಣಿಕೆಗಳನ್ನೂ ದೇವರಿಗೆ ಸಮರ್ಪಿಸಿದರು. 15ನೆತ್ತಿಯ ಮೇಲೆ ಬೂದಿಯನ್ನು ಹಚ್ಚಿಕೊಂಡು ದೇವರನ್ನು ಪ್ರಾರ್ಥಿಸುತ್ತಾ ಇಸ್ರಯೇಲಿನ ಮನೆತನಕ್ಕೆ ಕೃಪೆ ನೀಡಬೇಕೆಂದು ಯಾಚಿಸಿದರು.

## ಯುದ್ಧದ ಬಗ್ಗೆ ಸಮಾಲೋಚನೆ

*(ಹೊಲೊಫರ್ನೆಸನ ಗುಡಾರದಲ್ಲಿ)*

**5** ಇಸ್ರಯೇಲರು ಯುದ್ಧಕ್ಕೆ ಸಿದ್ಧರಾಗುತ್ತಿದ್ದಾರೆ, ಬೆಟ್ಟದ ಸಂದಿಗಳನ್ನು ಮುಚ್ಚಿ ಬಿಟ್ಟಿದ್ದಾರೆ; ಬೆಟ್ಟದ ತುದಿಗಳಲ್ಲಿ ಕಾವಲು ಪಡೆಗಳನ್ನಿಟ್ಟಿದ್ದಾರೆ; ಬಯಲುಗಳಲ್ಲಿ ಅಡಚಣೆಗಳನ್ನು ತಂದೊಡ್ಡಿದ್ದಾರೆ ಎಂಬ ರಹಸ್ಯ ಸುದ್ದಿ ಅಸ್ಸೀರಿಯರ ಪ್ರಧಾನ ಸೇನಾಧಿಪತಿ ಹೊಲೊಫರ್ನೆಸನ ಕಿವಿಗೆ ಮುಟ್ಟಿತು. 2ಹೊಲೊಫರ್ನೆಸ್ ಕೋಪೋದ್ರೇಕದಿಂದ ಮೊವಾಬ್ಯ ಅರಸರನ್ನೂ ಅಮ್ಮೋನ್ಯರ ದಳಪತಿಗಳನ್ನೂ ಕರಾವಳಿಯ ಪಾಳೆಯಗಾರರನ್ನೂ ಕರೆಸಿದನು. 3"ಕಾನಾನಿನ ಜನರೇ, ಹೇಳಿ; ಗುಡ್ಡಗಾಡಲ್ಲಿ ನೆಲಸಿರುವ ಆ ಜನರು ಯಾರು? ಅವರ ನಿವಾಸ ಪಟ್ಟಣಗಳು ಯಾವುವು? ಅವರ ಸೈನ್ಯದ ಗಾತ್ರವೆಷ್ಟು? ಅದರ ಶಕ್ತಿಸಾಮರ್ಥ್ಯದ ಮೂಲ ಯಾವುದು? ಅವರ ಸೈನ್ಯವನ್ನು ಪಾಲಿಸಿ ನಡೆಸುವಂಥ ಒಡೆಯನು ಯಾರು? 4ಇತರ ಪಾಶ್ಚಾತ್ಯರಂತೆ ಇವರು ನಮ್ಮೊಡನೆ ಸಂಧಾನ ಮಾಡಿಕೊಳ್ಳಲು ಬರದೆ ಇರಲು ಕಾರಣವೇನು?" ಎಂದು ಕೇಳಿದನು.

## ಆಕಿಯೋರನ ಭಾಷಣ

5 ಅಮ್ಮೋನ್ಯರ ಮುಖಂಡನಾದ ಆಕಿಯೋರ ಹೀಗೆಂದು ಪ್ರತ್ಯುತ್ತರವಿತ್ತನು: "ಒಡೆಯಾ, ದಾಸನಾದ ನಾನು ಹೇಳುವುದನ್ನು ದಯವಿಟ್ಟು ಕೇಳಿ: ನಿಮಗೆ ಹತ್ತಿರವೇ ಮನೆಮಾಡಿಕೊಂಡು ಇರುವ ಈ ಗುಡ್ಡಗಾಡಿನ ಜನರ ವಿಷಯವನ್ನು ನಿಮಗೆ ತಿಳಿಸುತ್ತೇನೆ. ಸತ್ಯವಲ್ಲದೆ ಬೇರೇನನ್ನೂ ನಿಮ್ಮ ದಾಸನಾದ ನಾನು ನುಡಿಯಲಾರೆ. 6ಈ ಜನ ಬಾಬಿಲೋನಿಯರ ಸಂತತಿಗೆ ಸೇರಿದವರು. ಬಾಬಿಲೋನಿಯದಲ್ಲಿ ವಾಸಮಾಡಿದ ಅವರ ಪಿತೃಗಳ ದೇವರುಗಳನ್ನು ಪೂಜಿಸಲು ಇಚ್ಛಿಸಲಿಲ್ಲ. ಆದುದರಿಂದ ಮೆಸಪಟೋಮಿಯಕ್ಕೆ ಬಂದು ನೆಲೆಸಿದರು. 7–8ಅವರ ಪಿತೃಗಳ ಮಾರ್ಗಗಳನ್ನು ತೊರೆದು, ಪರಲೋಕದ ದೇವರನ್ನು ಅಂಗೀಕರಿಸಿ, ಅವರಿಗೆ ಮಾತ್ರ ಆರಾಧನೆ ಸಲ್ಲಿಸಿದರು. ತಮ್ಮ ಸ್ವಂತ ದೇವದೇವತೆಗಳ ಸನ್ನಿಧಿಯಿಂದ ಬಹಿಷ್ಕೃತರಾಗಿ ಮೆಸಪಟೋಮಿಯಕ್ಕೆ ಪಲಾಯನ ಮಾಡಿ ಅಲ್ಲಿ ದೀರ್ಘಕಾಲ ವಾಸಮಾಡಿದರು.

9 ತರುವಾಯ ಅವರ ಸ್ವಂತ ಮನೆಯನ್ನು ಬಿಟ್ಟು ಕಾನಾನಿಗೆ ಹೋಗಬೇಕೆಂದು ದೇವರು ಆಜ್ಞಾಪಿಸಲಾಗಿ ಅವರು ಕಾನಾನಿಗೆ ಹೋಗಿ ಅಲ್ಲಿ ನೆಲೆಸಿದರು. ಬೇಕಾದಷ್ಟು ಬೆಳ್ಳಿಬಂಗಾರವನ್ನೂ ದನಕುರಿಗಳನ್ನೂ ಸಂಪಾದಿಸಿಕೊಂಡರು. 10ಕಾನಾನ್ ನಾಡಿನಾದ್ಯಂತ ಕ್ಷಾಮ ಬಂದಾಗ ಅಲ್ಲಿಂದ ಈಜಿಪ್ಟಿಗೆ ವಲಸೆ ಹೋದರು. ಚೆನ್ನಾಗಿ ಪೋಷಣೆ ಪಡೆಯುವವರೆಗೆ ಅಲ್ಲೇ ತಂಗಿದರು. ಅಲ್ಲಿ ಅವರು ಅತಿಯಾಗಿ ವೃದ್ಧಿಯಾದರು, ಎಣಿಸಲಾಗದಷ್ಟು ಹೆಚ್ಚು ಸಂಖ್ಯೆಯುಳ್ಳವರಾದರು. 11ಆಗ ಈಜಿಪ್ಟಿನ ಅರಸ ಅವರಿಗೆ ವಿರೋಧಿಯಾದ; ಶೋಷಣೆಗೆ ಗುರಿಪಡಿಸಿದ; ತನ್ನ ಪ್ರಯೋಜನಕ್ಕಾಗಿ ಬಲವಂತದಿಂದ ದುಡಿಸಿಕೊಂಡ; ಇಟ್ಟಿಗೆ ಕಲ್ಲುಗಳನ್ನು ಸುಡುವ ಕೆಲಸಕ್ಕೆ ನೇಮಿಸಿದ; ಹೀಗೆ ಕೀಳಾಗಿ ಕಂಡು ಅವರನ್ನು ದಾಸ್ಯಕ್ಕೆ ಇಳಿಸಿದ.

12 ಆಗ ಅವರು ತಮ್ಮ ದೇವರಿಗೆ ಮೊರೆ ಇಟ್ಟರು. ಆ ದೇವರಾದರೋ ಈಜಿಪ್ಟಿನ ಮೇಲೆಲ್ಲಾ ಗುಣಪಡಿಸಲಾಗದ ಘೋರವಾದ ವಿಪತ್ತುಗಳು ಎರಗುವಂತೆ ಮಾಡಿದರು. ಈಜಿಪ್ಟಿನವರು ಅವರನ್ನು ನಾಡಿನಿಂದ ಅಟ್ಟಿಬಿಟ್ಟರು.

13 ದೇವರು ಅವರ ದಾರಿಗೆ ಅಡ್ಡವಾಗಿದ್ದ ಕೆಂಪು ಸಮುದ್ರವನ್ನು ಒಣಗಿಸಿ, ಸೀನಾಯಿ ಮತ್ತು ಕಾದೇಶ್–ಬರ್ನೆಯಾ ಮೂಲಕ ನಡೆಸಿಕೊಂಡು ಹೋದರು. 14ಮರುಭೂಮಿಯಲ್ಲಿ ನೆಲೆಸಿದ್ದವರನ್ನೇ ದೂರ ಅಟ್ಟಿಬಿಟ್ಟು ಅಮೋರಿಯರ ನಾಡಿನಲ್ಲಿ ನೆಲೆಸಿದರು. 15ಆಗ ಹೆಷ್ಬೋನಿನ ಜನಾಂಗವನ್ನೇ ನಾಶಗೊಳಿಸಿದರು. ಅಷ್ಟು ಶಕ್ತಿ ಅವರಿಗಿತ್ತು. ಅನಂತರ ಜೋರ್ಡನ್ ನದಿಯನ್ನು ದಾಟಿ, ಅಲ್ಲಿದ್ದ ಗುಡ್ಡಗಾಡಿನ ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಂಡರು. 16ಅಲ್ಲಿಂದ ಕಾನಾನ್ಯರು, ಪೆರಿಜೀಯರು, ಯೆಬೂಸಿಯರು, ಶೆಕೆಮಿನವರು, ಗಿರ್ಗಾಷಿಯರು ಮುಂತಾದವರನ್ನೆಲ್ಲ ಓಡಿಸಿಬಿಟ್ಟು, ಅನೇಕ ವರ್ಷಗಳವರೆಗೆ ಅಲ್ಲೇ ಜೀವಿಸಿದರು.

17 ಇಸ್ರಯೇಲಿನ ದೇವರು ಕೇಡನ್ನು ಸಹಿಸರು. ಜನರು ಅವರ ವಿರುದ್ಧ ಯಾವ ಪಾಪವನ್ನು ಮಾಡದಿದ್ದಾಗ ಅವರಿಗೆ ಶುಭವಾಗುತ್ತಿತ್ತು. 18ಆದರೆ ಯಾವಾಗ ಜನರು ಆ ದೇವರು ಸೂಚಿಸಿದ ಸನ್ಮಾರ್ಗವನ್ನು ಬಿಟ್ಟು ಬೇರೆ ದೇವದೇವತೆಗಳನ್ನು ಪೂಜಿಸತೊಡಗಿದರೋ, ಆಗ ಅವರಿಗೆ ವಿಪತ್ತು ಬಂದೊದಗುತ್ತಿತ್ತು. ಅವರಲ್ಲಿ ಅನೇಕರು ಹಲವಾರು ಕಾಳಗಗಳಲ್ಲಿ ಮಡಿದರು. ಇತರರು ಬೇರೆ ದೇಶಕ್ಕೆ ಸೆರೆಹೋದರು. ಅವರ ಮಹಾದೇವಾಲಯ ನೆಲಸಮವಾಯಿತು. ಅವರ ಪಟ್ಟಣಗಳು ಶತ್ರುಗಳ ವಶವಾದುವು. 19ಆಗ ಪುನಃ ಇಸ್ರಯೇಲರು ತಮ್ಮ ದೇವರ ಕಡೆಗೆ ತಿರುಗಿಕೊಂಡು ಸ್ವಂತ ನಾಡಿಗೆ ಹಿಂದಿರುಗಿದರು. ಗಡೀಪಾರಾಗಿ ಚದುರಿ ಹೋದವರು ಮರಳಿಬಂದು, ತಮ್ಮ ಮಹಾದೇವಾಲಯವಿರುವ ಜೆರುಸಲೇಮ್ ಪಟ್ಟಣವನ್ನು ವಶಪಡಿಸಿಕೊಂಡಿದ್ದಾರೆ. ಹೀಗೆ ನಿರ್ಜನವಾಗಿದ್ದ ಆ ಗುಡ್ಡಗಾಡಿನ ನಾಡಿನಲ್ಲಿ ಅವರು ಜೀವಿಸುತ್ತಾ ಇದ್ದಾರೆ. 20ಆದುದರಿಂದ ಒಡೆಯಾ, ದೊರೆಯೇ, ಈ ಜನರು ಯಾವುದಾದರೂ ತಪ್ಪನ್ನು ಮಾಡಿದ್ದರೆ, ಅವರ ದೇವರಿಗೆ ದ್ರೋಹಬಗೆದಿದ್ದರೆ, ಖಂಡಿತವಾಗಿ ನಮ್ಮ ಕೈಗೆ ಸಿಕ್ಕಿಬೀಳುವರು. ಇದನ್ನು ನಿಗದಿ ಮಾಡಿಕೊಂಡರೆ ನಾವು ಅವರಿಗೆ ಇದಿರಾಗಿ ಹೋಗಿ, ಮುತ್ತಿಗೆ ಹಾಕಬಹುದು. 21ಆದರೆ, ಅವರ ರಾಷ್ಟ್ರ ನಿರ್ದೋಷವಾಗಿದ್ದರೆ, ಒಡೆಯಾ, ನಾವು ಸುಮ್ಮನಿರುವುದು ಒಳಿತು. ಏಕೆಂದರೆ, ಅವರ ದೇವರಾದ ಸರ್ವೇಶ್ವರ ಅವರನ್ನು ಸಂರಕ್ಷಿಸುತ್ತಾರೆಂಬ ಭಯವಿದೆ. ಆಗ ನಾವು ಸೋತು ಇಡೀ ವಿಶ್ವಕ್ಕೇ ನಗೆಪಾಟಲಾಗಬೇಕಾಗುವುದು."

### ಜನರ ಪ್ರತಿಕ್ರಿಯೆ

22 ಆಕಿಯೋರನು ತನ್ನ ಭಾಷಣವನ್ನು ಮುಗಿಸಿದಾಗ, ಗುಡಾರದ ಸುತ್ತಲಿದ್ದ ಜನರೆಲ್ಲರು
ಪ್ರತಿಭಟಿಸಲು ಪ್ರಾರಂಭಿಸಿದರು. ಹೊಲೊಫರ್ನೆಸನ ಕೈಕೆಳಗಿನ ಹಿರಿಯ ಅಧಿಕಾರಿಗಳು, ಕರಾವಳಿಯ ಜನರು
ಮತ್ತು ಮೋವಾಬ್ಯರು ಅವನ ಅಂಗಾಂಗಳನ್ನು ಕಿತ್ತುಹಾಕಬೇಕೆಂದು ಬೆದರಿಕೆ ಹಾಕಿದರು. 23"ನಾವು
ಇಸ್ರಯೇಲರಿಗೆ ಭಯಪಡುವುದೇಕೆ? ಅವರು ದುರ್ಬಲರು, ಅಶಕ್ತರು; ನಮ್ಮ ಬಲವಂತ ಸೈನ್ಯವನ್ನು
ಎದುರಿಸಲಾರರು. ನಡೆಯಿರಿ, ಹೋಗೋಣ, ಹೊಲೊಫರ್ನೆಸರೇ, ನಮ್ಮೊಡೆಯರೇ, ನಿಮ್ಮ ಸೈನ್ಯವು
ಅವರನ್ನೆಲ್ಲ ಒಂದೇ ತುತ್ತಿಗೆ ಕಬಳಿಸಬಲ್ಲದು," ಎಂದರು.

### ಹೊಲೊಫರ್ನೆಸನ ಭಾಷಣ

**6** ಸುತ್ತಮುತ್ತ ನಿಂತಿದ್ದ ಜನರ ಕೂಗಾಟ ನಿಂತಿತು. ಅಸ್ಸೀರಿಯರ ಪ್ರಧಾನ ಸೇನಾಧಿಪತಿಯಾದ
ಹೊಲೊಫರ್ನೆಸ್ ಆಕಿಯೋರನನ್ನು ಪರಕೀಯರ ಹಾಗು ಅಮ್ಮೋನ್ಯರ ಮುಂದೆ ಖಂಡಿಸುತ್ತಾ ಹೀಗೆಂದನು:
2"ಆಕಿಯೋರ್, ನೀನು ಯಾರೆಂದು ನೆನಸುತ್ತೀ? ನೀನು ಮತ್ತು ಎಫ್ರಯಿಮರ ರಹಸ್ಯ ಕೂಲಿಯಾಳುಗಳು
ಇಲ್ಲಿ ಮಾಡುತ್ತಿರುವುದೇನು? ಇಸ್ರಯೇಲರ ವಿರುದ್ಧ ಯುದ್ಧಮಾಡಬಾರದೆಂದು ಪ್ರವಾದಿಯ ವೇಷಧರಿಸಿ,
ನಮ್ಮನ್ನು ಇಂದು ತಡೆಯಲು ಪ್ರಯತ್ನಿಸುತ್ತೀಯೋ? ಅವರ ದೇವರು ಅವರನ್ನು ಕಾಪಾಡುತ್ತಾರೆಂದು
ವಾದಿಸುತ್ತೀಯೋ? 3ನೆಬೂಕದ್ನೆಚ್ಚರನ ಹೊರತು ಬೇರಾವ ದೇವರಿದ್ದಾರೆ? ನೆಬೂಕದ್ನೆಚ್ಚರನೇ ತನ್ನ
ಶಕ್ತಿಸಾಮರ್ಥ್ಯವನ್ನು ಪ್ರದರ್ಶಿಸುವನು. ಆ ಜನರನ್ನೆಲ್ಲ ಧರೆಯಿಂದ ನಿರ್ಮೂಲಮಾಡುವನು.
ಖಂಡಿತವಾಗಿಯೂ ಅವರನ್ನು ಆ ದೇವರಿಂದ ರಕ್ಷಿಸಲು ಸಾಧ್ಯವಾಗದು. ನೆಬೂಕದ್ನೆಚ್ಚರನ ಸೇವಕರಾದ
ನಮ್ಮ ಮುಂದೆ ಅವರೆಲ್ಲರು ಒಂದೇ ಆಳಿನಂತಿದ್ದಾರೆ. ಅವರನ್ನು ಸುಲಭವಾಗಿ ಧ್ವಂಸ ಮಾಡಬಲ್ಲೆವು. 4ನಮ್ಮ
ರಾಹುತರನ್ನು ಎದುರಿಸಲು ಅವರಿಂದ ಎಂದಿಗೂ ಆಗದು. ಅವರೆಲ್ಲರನ್ನು ಸುಟ್ಟುಹಾಕುವೆವು. ಆ
ಬೆಟ್ಟಗುಡ್ಡಗಳು ಅವರ ರಕ್ತ ಕುಡಿದು ಮುಕ್ತವಾಗುವುವು; ಅವರ ಬಯಲಿನಲ್ಲಿ ಹೆಣಗಳು ತುಂಬಿರುವುವು.
ನಮ್ಮನ್ನು ಎದುರಿಸುವುದಿರಲಿ, ಅವರಲ್ಲಿ ಪ್ರತಿಯೊಬ್ಬನು ಮಡಿದುಹೋಗುವನು. ವಿಶ್ವದೊಡೆಯನೂ
ಅರಸನೂ ಆದ ನೆಬೂಕದ್ನೆಚ್ಚರನ ನುಡಿಗಳಿವು. ಆ ಅರಸನ ಮಾತುಗಳಿವು. ಅವನ ಮಾತು ವ್ಯರ್ಥವಾಗದು.
5ನೀನಾದರೋ, ಆಕಿಯೋರನೇ, ಅಮ್ಮೋನ್ಯರ ಕೈಕೂಲಿಯಾಳಾಗಿ ದುಡುಕುತನದಿಂದ ಮಾತಾಡಿರುವೆ;
ಈಜಿಪ್ಟಿನಿಂದ ಬಂದಿರುವ ಈ ಸಂತಾನದ ಮೇಲೆ ಸೇಡನ್ನು ತೀರಿಸುವತನಕ ನೀನು ನನ್ನ ಮುಖವನ್ನು
ನೋಡುವುದಿಲ್ಲ. 6ಅವರೆಲ್ಲರು ಸತ್ತಮೇಲೆ ನನ್ನ ಯೋಧರ ಕತ್ತಿಗಳು ನಿನ್ನ ಪಕ್ಕೆಯನ್ನು ತಿವಿಯುವುವು;
ನಾಯಕರ ಭರ್ಜಿಗಳು ನಿನ್ನ ಹೊಟ್ಟೆಯನ್ನು ಇರಿಯುವುವು; ಇಸ್ರಯೇಲರ ಕಡೆ ನಾನು ತಿರುಗಿದ
ಕ್ಷಣಮಾತ್ರದಲ್ಲಿ ನೀನು ಗಾಯಗೊಂಡು ಅವರ ಶವಗಳ ಮಧ್ಯೆ ಬೀಳುವೆ.

7 "ಈಗ ನನ್ನ ಸೇವಕರು ನಿನ್ನನ್ನು ಆ ಗುಡ್ಡಗಾಡಿಗೆ ಕೊಂಡೊಯ್ದು ಆ ಕಣಿವೆಯ ಹಾದಿಯಲ್ಲಿ
ಯಾವುದಾದರೊಂದು ಊರಿನ ಬಳಿ ಬಿಡುವರು. 8ಅವರೊಡನೆ ನೀನೂ ನಾಶವಾಗುವವರೆಗೆ, ನಿನ್ನ ಪ್ರಾಣ
ಭದ್ರವಾಗಿರುತ್ತದೆ. 9ಚಿಂತಾಕ್ರಾಂತನಾಗಬೇಡ; ಅವರು ನಮ್ಮ ಆಕ್ರಮಣಕ್ಕೆ ತುತ್ತಾಗುವುದಿಲ್ಲ ಎಂಬ ನಂಬಿಕೆ
ನಿನಗಿದೆಯಲ್ಲವೆ? ನಾನು ನುಡಿದಿದ್ದೇನೆ. ನನ್ನ ಮಾತುಗಳಲ್ಲಿ ಯಾವುದೂ ವ್ಯರ್ಥವಾಗದು," ಎಂದನು.

### ಆಕಿಯೋರನು ಬೆಥೂಲಿಯದಲ್ಲಿ

10 ಆಕಿಯೋರನನ್ನು ಬೆಥೂಲಿಯಕ್ಕೆ ಕೊಂಡೊಯ್ದು ಇಸ್ರಯೇಲರ ವಶಕ್ಕೆ ಒಪ್ಪಿಸಬೇಕೆಂದು
ಹೊಲೊಫರ್ನೆಸ್ ತನ್ನ ಗುಡಾರದ ಕಾವಲಾಳುಗಳಿಗೆ ಆಜ್ಞೆಯಿತ್ತನು. 11ಅಂತೆಯೇ ಅವರು ಆಕಿಯೋರನನ್ನು
ಕರೆದುಕೊಂಡು ಪಾಳೆಯದ ಹೊರಕ್ಕೆ ಹೋಗಿ ಬಯಲಿನ ಮಾರ್ಗವಾಗಿ ಗುಡ್ಡಗಾಡಿಗೆ ಬಂದು,
ಬೆಥೂಲಿಯದ ತಗ್ಗಿನಲ್ಲಿರುವ ಬುಗ್ಗೆಗಳ ಬಳಿ ಇಳಿದರು. 12ಆ ಊರಿನ ಜನರ ಕಣ್ಣಿಗೆ ಇವರು ಬಿದ್ದದ್ದೇ,
ಅವರು ಈ ಕಾವಲಾಳುಗಳ ಆಯುಧಗಳನ್ನು ಕಿತ್ತುಕೊಂಡು ಗುಡ್ಡದ ಮೇಲಕ್ಕೆ ಧಾವಿಸಿದರು. ಅಲ್ಲಿಂದ
ಕವಣೆಗಾರರು ಆಕಿಯೋರನನ್ನು ಕರೆತಂದ ಕಾವಲಾಳುಗಳ ಮೇಲೆ ಕಲ್ಲೆಸೆದು, ಅವರು ಗುಡ್ಡವನ್ನು

ಹತ್ತಲಾಗದಂತೆ ಮಾಡಿದರು. 13ಅಂತೂ ಕಾವಲಾಳುಗಳು ಬೆಟ್ಟದ ಇಳಿಜಾರಿಗೆ ಬಂದು ಆಕಿಯೋರನನ್ನು ಕಟ್ಟಿ, ಬೆಟ್ಟದ ಅಡಿಭಾಗದಲ್ಲಿ ಬಿಟ್ಟು, ತಮ್ಮ ಒಡೆಯನ ಬಳಿಗೆ ಹಿಂದಿರುಗಿದರು.

14 ಆಗ ಇಸ್ರಯೇಲರು ಪಟ್ಟಣದಿಂದ ಕೆಳಕ್ಕೆ ಇಳಿದು ಬಂದು ಆಕಿಯೋರನನ್ನು ಕಂಡರು. ಅವನ ಕಟ್ಟುಗಳನ್ನು ಬಿಚ್ಚಿ ಬೆಥೂಲಿಯಕ್ಕೆ ಕರೆದುಕೊಂಡು ಹೋಗಿ, ತಮ್ಮ ಮುಖಂಡರ ಮುಂದೆ ನಿಲ್ಲಿಸಿದರು. 15ಆಗ ಸಿಮೆಯೋನ ಕುಲದ ಮೀಕನ ಮಗ ಉಜ್ಜೀಯ, ಗೊತ್ತೋನಿಯೆಲನ ಮಗ ಚಾಬ್ರಿ, ಮತ್ತು ಮೆಲ್ಕೀಯನ ಮಗ ಕಾರ್ಮಿ ಇವರು ಇಸ್ರಯೇಲರ ಮುಖಂಡರಾಗಿದ್ದರು. 16ಇವರು ಪಟ್ಟಣದ ಪ್ರಮುಖರನ್ನು ಕರೆಸಿದರು. ಯುವಕಯುವತಿಯರು ಸಹ ಕೂಟಕ್ಕೆ ತವಕದಿಂದ ಹಾಜರಾದರು. ಜನರೆಲ್ಲರು ಆಕಿಯೋರನ ಸುತ್ತ ನಿಂತರು. ಸಮಾಚಾರವೇನೆಂದು ಉಜ್ಜೀಯನು ಆಕಿಯೋರನನ್ನು ಕೇಳಿದನು. 17ಅವನು ಹೊಲೊಫರ್ನೆಸನ ಆಲೋಚನಾ ಸಭೆಯಲ್ಲಿ ನಡೆದ ಮಾತುಕತೆಯ ಬಗ್ಗೆ ವಿವರಿಸಿದನು; ಅಸ್ಸೀರಿಯರ ನಾಯಕರುಗಳ ಮುಂದೆ ತಾನು ಆಡಿದ ಮಾತುಗಳನ್ನು ತಿಳಿಸಿ, ಹೊಲೊಫರ್ನೆಸನು ಇಸ್ರಯೇಲ್ ಮನೆತನಕ್ಕೆ ಏನೇನು ಮಾಡಲಿರುವನೆಂದು ಕೊಚ್ಚಿಕೊಂಡ ರೀತಿಯನ್ನು ಬಣ್ಣಿಸಿದನು. 18ಇದನ್ನು ಕೇಳಿ ಆ ಜನರು ದೇವರಿಗೆ ಅಡ್ಡಬಿದ್ದು ಹೀಗೆಂದು ಪ್ರಾರ್ಥಿಸಿದರು: 19“ಪರಲೋಕದಲ್ಲಿರುವ ಸರ್ವೇಶ್ವರನಾದ ದೇವರೇ, ನಮ್ಮ ಶತ್ರುಗಳ ಸೊಕ್ಕನ್ನು ಗಮನಿಸಿ, ನಮ್ಮ ಜನತೆಗೆ ಉಂಟಾಗಲಿರುವ ನಿಂದೆ ಅವಮಾನ ತೊಲಗುವಂತೆ ಮಾಡಿರಿ. ನಿಮಗೆ ಪ್ರತಿಷ್ಠಿತರಾದ ಪ್ರಜೆಯ ಮೇಲೆ ಇಂದು ಕರುಣೆತೋರಿ,” ಎಂದು ಯಾಚಿಸಿದರು. 20ಅನಂತರ ಆಕಿಯೋರನಿಗೆ ಅಭಯವಿತ್ತು ಅವನನ್ನು ಬಹುವಾಗಿ ಪ್ರಶಂಶಿಸಿದರು. 21ಕೂಟ ಮುಗಿದ ನಂತರ ಉಜ್ಜೀಯನು ಅವನನ್ನು ತನ್ನ ಮನೆಗೆ ಕರೆದೊಯ್ದು ಊರ ಹಿರಿಯರಿಗೆ ಔತಣವನ್ನು ಏರ್ಪಡಿಸಿದನು. ಆ ರಾತ್ರಿಯೆಲ್ಲ ಅವರು ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು.

### ಬೆಥೂಲಿಯಕ್ಕೆ ಮುತ್ತಿಗೆ

**7** 1–2ಮಾರನೆಯ ದಿನ ಹೊಲೊಫರ್ನೆಸನು ಇಸ್ರಯೇಲರ ಮೇಲೆ ದಂಡಯಾತ್ರೆಯನ್ನು ಪ್ರಾರಂಭಿಸುವ ಸಲುವಾಗಿ ಬೆಟ್ಟಗಳ ಮಧ್ಯೆ ಇರುವ ಕಣಿವೆಯ ಹಾದಿಯನ್ನು ಆಕ್ರಮಿಸಿಕೊಳ್ಳಬೇಕೆಂದು ಇಡೀ ಸೈನ್ಯಕ್ಕೂ ಮಿತ್ರಪಡೆಗಳಿಗೂ ಆಜ್ಞೆ ಹೊರಡಿಸಿದನು; ಬೆಥೂಲಿಯಕ್ಕೆ ಮುತ್ತಿಗೆ ಹಾಕಲು ಪಾಳೆಯದಿಂದ ಹೊರಡಬೇಕೆಂದು ಸೂಚಿಸಿದನು. 2 120,000 ಜನರಿಂದ ಕೂಡಿದ ಸೇನಾದಳ, 12,000 ರಾಹುತರು ಮತ್ತು ಇವರಿಗಾಗಿ ಸರಕು ಸರಂಜಾಮುಗಳನ್ನು ಹೊತ್ತು ಹಿಂಬಾಲಿಸುವ ಸಹಸ್ರಾರು ಕಾಲಾಳುಗಳು ಹೀಗೆ ಬೃಹತ್ತಾದ ಸೇನೆ ದಂಡಯಾತ್ರೆಗೆ ಹೊರಟಿತು. 3ಅವರೆಲ್ಲರು ಬೆಥೂಲಿಯದ ಪಕ್ಕದ ಕಣಿವೆಯ ಬುಗ್ಗೆಯ ಬಳಿಗೆ ಹೋಗಿ, ದೋತಾನಿನಿಂದ ಬಾಲ್ಬಾಯಿಮ್‌ನವರೆಗೂ, ಬೆಥೂಲಿಯದಿಂದ ಎಸ್ದ್ರಲೋನಿಗೆ ಎದುರಿಗಿರುವ ಚಿಯಾಮೊನಿನವರೆಗೂ ಹರಡಿಕೊಂಡರು. 4ಇಸ್ರಯೇಲರು ಈ ದಂಡಿನ ಗಾತ್ರವನ್ನು ನೋಡಿ ಗಾಬರಿಗೊಂಡು, “ಈಗ ಅವರು ನಮ್ಮ ಇಡೀ ನಾಡನ್ನು ನೆಕ್ಕಿ ನುಂಗಿ ಬಿಡುವರು; ನಮ್ಮ ಅತ್ಯುನ್ನತ ಶಿಖರಗಳಾಗಲೀ ಕಮರಿಕಣಿವೆಗಳಾಗಲೀ ಅವರ ಒತ್ತಡವನ್ನು ತಡೆಯಲಾರವು” ಎಂದು ಒಬ್ಬರಿಗೊಬ್ಬರು ಹೇಳಿಕೊಂಡರು. 5ಪ್ರತಿಯೊಬ್ಬನೂ ತನ್ನ ಆಯುಧಗಳನ್ನು ಹಿಡಿದುಕೊಂಡನು; ಕಾವಲು ಗೋಪುರಗಳ ಮೇಲೆ ಪಂಜುಗಳನ್ನು ಹೊತ್ತಿಸಿಕೊಂಡು ರಾತ್ರಿಯೆಲ್ಲಾ ಕಾವಲಿದ್ದರು.

6 ಮಾರನೆಯ ದಿನ ಹೊಲೊಫರ್ನೆಸನು ರಾಹುತರನ್ನು ಇಸ್ರಯೇಲರ ಮುಂದೆಯೇ ಬೆಥೂಲಿಯದಲ್ಲಿ ಹರಡಿದನು. 7ಪಟ್ಟಣಕ್ಕೆ ಮುಟ್ಟುವ ಇಳಿಜಾರು ಹಾದಿಯನ್ನು ಪರೀಕ್ಷಿಸಿದನು. ಕುಡಿಯಲು ನೀರಿರುವ ಸ್ಥಳಗಳನ್ನು ಗುರುತಿಸಿ ಆಕ್ರಮಣ ಮಾಡಿದನು. ಗಡಿಕಾವಲಿಗೆಂದು ಅಲ್ಲಲ್ಲಿ ಸೈನಿಕರನ್ನು ಇರಿಸಿದನು. ಅನಂತರ ಮುಖ್ಯ ಪಾಳೆಯಕ್ಕೆ ಹಿಂದಿರುಗಿದನು. 8ಏಸಾವನ ಗೋತ್ರದ ಮುಖಂಡರು, ಮೋವಾಬ್ಯರ ನಾಯಕರು ಹಾಗೂ ಕರಾವಳಿಯ ಪ್ರಾಂತ್ಯದ ದಳಪತಿಗಳು ಹೊಲೊಫರ್ನೆಸನ ಬಳಿಗೆ ಬಂದು, 9 “ಒಡೆಯರಿಗೆ ಚಿತ್ತವಿದ್ದರೆ ನಾವು ಹೇಳಿದಂತೆ ಮಾಡಬಹುದು; ಆಗ ನಿಮ್ಮ ಸೈನ್ಯಕ್ಕೆ ಸ್ವಲ್ಪವಾದರೂ ತೊಂದರೆ ಆಗದು. 10ಈ ಇಸ್ರಯೇಲರ ನಂಬಿಕೆ ಇರುವುದು ಭರ್ಜಿಗಳಲ್ಲಿ ಅಲ್ಲ, ಅವರ ಸುಭದ್ರತೆ ಇರುವುದು ಬೆಟ್ಟದ ತುದಿಯಲ್ಲಿ. ಕಾರಣ, ಯಾರೂ ಈ ಮೇಡನ್ನು ಸುಲಭವಾಗಿ ಹತ್ತಲಾಗದು.

11 “ಆದುದರಿಂದ ಒಡೆಯರೇ, ನಿಮ್ಮಲ್ಲಿ ಒಬ್ಬನನ್ನಾದರೂ ಕಳೆದುಕೊಳ್ಳದಿರಬೇಕಾದರೆ, ಅವರೊಡನೆ ಈ ಗುಡ್ಡಪ್ರದೇಶದಲ್ಲಿ ಯುದ್ಧಕ್ಕೆ ಇಳಿಯಬೇಡಿ. 12ತಾವು ಪಾಳೆಯದಲ್ಲೇ ಇದ್ದು ಸೈನ್ಯವನ್ನು ಅಲ್ಲೇ ಇರಿಸಿರಬೇಕು. ಬೆಟ್ಟದ ತುದಿಯಲ್ಲಿ ನೀರಿನ ಬುಗ್ಗೆಯೊಂದಿದೆ. 13ಇಡೀ ಬೆಥೂಲಿಯಕ್ಕೆ ನೀರು ಸರಬರಾಜಾಗುವುದು ಅಲ್ಲಿಂದಲೇ. ಅದನ್ನು ಮಾತ್ರ ತಮ್ಮ ಸೇವಕರು ಆಕ್ರಮಿಸಿಕೊಂಡರೇ ಸಾಕು. ಅವರು ನೀರಡಿಕೆಯಿಂದ ಬಳಲಿ ಶರಣಾಗತರಾಗುವರು. ಪಟ್ಟಣವನ್ನು ತಮಗೆ ಒಪ್ಪಿಸಿಬಿಡುವರು. ಅಷ್ಟರಲ್ಲಿ ನಾವೂ ನಮ್ಮ ಜನರೂ ಅತೀ ಹತ್ತಿರ ಇರುವ ಬೆಟ್ಟದ ತುದಿಗಳನ್ನು ಮುಟ್ಟಿ ಸೈನಿಕರನ್ನು ನೇಮಿಸುತ್ತೇವೆ. ಪಟ್ಟಣದಿಂದ ಯಾರೂ ಆಚೆ ಬಾರದಂತೆ ಅವರು ನೋಡಿಕೊಳ್ಳುವರು. 14ಬೆಥೂಲಿಯದವರೆಲ್ಲರೂ ಮಡದಿ ಮಕ್ಕಳೊಡನೆ ಹಸಿವಿನಿಂದ ಬಳಲುವರು. ನಿಮ್ಮ ಕತ್ತಿಯ ಬಾಯಿಗೆ ಸಿಗುವ ಮುನ್ನ ತಮ್ಮ ಮನೆಗಳ ಮುಂದೆ ಬೀದಿಗಳಲ್ಲಿ ಬಿದ್ದಿರುವರು. 15ಅವರು ನಿಮ್ಮೊಡನೆ ಸಂಧಾನ ಮಾಡಿಕೊಳ್ಳಲು ನಿರಾಕರಿಸಿದ್ದಕ್ಕೆ, ಅವರ ಆ ಉದ್ಧಟತನಕ್ಕೆ, ತಕ್ಕ ಶಾಸ್ತಿಯಾಗುವಂತೆ ಮಾಡುವಿರಿ,” ಎಂದರು.

16 ಹೊಲೊಫರ್ನೆಸ್ ಮತ್ತು ಅವನೊಂದಿಗೆ ಇದ್ದ ಇತರ ಸೇನಾಧಿಪತಿಗಳಿಗೆ ಅವರ ಮಾತು ತುಂಬಾ ಹಿಡಿಯಿತು. ಅವರ ಸಲಹೆಯ ಪ್ರಕಾರ ಮಾಡಲು ಹೊಲೊಫರ್ನೆಸ್ ತೀರ್ಮಾನಿಸಿದನು. 17ಮೋವಾಬ್ಯರ ಸೇನಾಪಡೆ ಸುಮಾರು ಐದು ಸಾವಿರ ಅಸ್ಸೀರಿಯರೊಂದಿಗೆ ಮುಂದಕ್ಕೆ ಹೋಯಿತು. ಅವರು ಕಣಿವೆಯ ಮಾರ್ಗವಾಗಿ ಹೋಗಿ ಇಸ್ರಯೇಲರ ನೀರಿನ ಬುಗ್ಗೆಗಳನ್ನು ಆಕ್ರಮಿಸಿಕೊಂಡರು. 18ಅಷ್ಟರಲ್ಲಿ ಎದೋಮ್ಯರೂ ಅಮ್ಮೋನ್ಯರೂ ದೋತಾನನಿಗೆ ಎದುರಾಗಿರುವ ಮೇಲ್ನಾಡಿನಲ್ಲಿ ಅನುಕೂಲವಾದ ಸ್ಥಳವನ್ನು ಆಕ್ರಮಿಸಿಕೊಂಡರು. ತಮ್ಮಲ್ಲಿ ಕೆಲವರನ್ನು ಆಗ್ನೇಯದಲ್ಲಿರುವ ವಾಡಿಮೊಕ್‌ಮೂರಿನ ಎದುರಿಗೆ ಕೌಸಿನ ಬಳಿಯಿರುವ ಎಗ್ರೆಬೆಗೆ ಕಳುಹಿಸಿದರು. ಅಸ್ಸೀರಿಯಾ ಸೈನ್ಯದ ಇತರ ದಳಗಳು ಬಯಲಿನಲ್ಲೇ ಇದ್ದು ಕೊಂಚ ಸ್ಥಳವನ್ನೂ ಬಿಡದೆ ಎಲ್ಲ ಭಾಗವನ್ನು ಆಕ್ರಮಿಸಿಕೊಂಡರು. ಅವರ ಅಸಂಖ್ಯಾತ ಗುಡಾರಗಳು, ಆಯುಧಗಳು ಮುಂತಾದುವೆಲ್ಲವು ಸೇರಿ ಅವೇ ಒಂದು ಬೃಹತ್ ಪಾಳೆಯವಾಗಿ ಕಾಣಿಸುತ್ತಿತ್ತು.

19 ಶತ್ರುಗಳು ಸುತ್ತುವರೆದು ಹಿಮ್ಮೆಟ್ಟಲು ಸಾಧ್ಯವಾಗದಂತೆ ತಡೆದುಕೊಂಡಿರಲಾಗಿ, ಇಸ್ರಯೇಲರು ಧೈರ್ಯಗೆಟ್ಟು, ಸರ್ವೇಶ್ವರನಾದ ದೇವರಿಗೆ ಮೊರೆಯಿಟ್ಟರು. 20ರಾಹುತರು, ರಥಗಳು ಮತ್ತು ಕಾಲಾಳುಗಳನ್ನೊಳಗೊಂಡ ಅಸ್ಸೀರಿಯರ ಸೈನ್ಯ ಅವರನ್ನು ಮೂವತ್ತನಾಲ್ಕು ದಿನಗಳವರೆಗೆ ಮುತ್ತಿಕೊಂಡಿತ್ತು. 21ಬೆಥೂಲಿಯದ ನಿವಾಸಿಗಳ ಮನೆಯಲ್ಲಿ ನೀರಿನ ಬಾನೆಗಳೆಲ್ಲ ಖಾಲಿಯಾಗಿದ್ದವು. ಕೊಳಗಳಲ್ಲಿ ಅವರು ಶೇಖರಿಸಿಟ್ಟ ನೀರೆಲ್ಲ ಇಂಗಿಹೋಗಿತ್ತು. ನೀರಿನ ಕೊರತೆಯ ನಿಮಿತ್ತ ದಿನಕ್ಕೆ ಸಾಕಾಗುವಷ್ಟು ಯಾರೂ ಕುಡಿಯುವಂತಿರಲಿಲ್ಲ. 22ಮಕ್ಕಳೆಲ್ಲ ಸೊರಗುತ್ತಿದ್ದವು; ಮಹಿಳೆಯರು, ಯುವಕರು ಬಾಯಾರಿ ಬಳಲಿದರು. ಕೆಲವರು ನಿಶ್ಯಕ್ತರಾಗಿ ಬೀದಿಗಳಲ್ಲೂ ಪಟ್ಟಣದ ಬಾಗಿಲ ಬಳಿಯಲ್ಲೂ ಕುಸಿದುಬಿದ್ದರು.

23 ಯುವಕರು, ಮಹಿಳೆಯರು, ಮಕ್ಕಳು ಎನ್ನದೆ ಎಲ್ಲರೂ ಉಜ್ಜೀಯನ ಬಳಿಗೆ ಬಂದು ಗೋಳಿಟ್ಟರು: ಊರ ಹಿರಿಯರು ಪ್ರಮುಖರ ಮುಂದೆ ಬಂದು ಕೂಗಾಡಿದರು: 24“ನಿಮಗೂ ನಮಗೂ ದೇವರೇ ನ್ಯಾಯ ತೀರಿಸಲಿ. ಅಸ್ಸೀರಿಯರೊಡನೆ ಸಂಧಾನ ಮಾಡಿಕೊಳ್ಳದೆ ನಮ್ಮನ್ನು ತುಂಬಾ ಅಪಾಯಕ್ಕೊಳಗಾಗಿಸಿದ್ದೀರಿ. 25ಈಗ ನಮಗೆ ಸಹಾಯಕರು ಯಾರೂ ಇಲ್ಲ. ನೀರಡಿಕೆ, ನಿಸ್ಸಹಾಯಕತೆಗಳಿಂದ ಶತ್ರುಗಳ ಮುಂದೆ ಶರಣಾಗಬೇಕೆಂದು ದೇವರು ನಮ್ಮನ್ನು ಕೈ ಬಿಟ್ಟಿದ್ದಾರೆ. 26ಅಸ್ಸೀರಿಯರನ್ನು ಕೂಡಲೇ ಕರೆಸಿರಿ. ಪಟ್ಟಣವನ್ನೆಲ್ಲ ಮುತ್ತಿಗೆ ಹಾಕಿ ಸೂರೆಮಾಡುವಂತೆ ಹೊಲೊಫರ್ನೆಸನಿಗೂ ಅವನ ಜನರಿಗೂ ಸೈನ್ಯಕ್ಕೂ ಒಪ್ಪಿಸಿಬಿಡಿ. 27ಈಗಿರುವುದಕ್ಕಿಂತ ಅವರಿಗೆ ಕೊಳ್ಳೆಯಾಗಿ ಬಿಡುವುದೇ ಲೇಸು. ನಾವು ಗುಲಾಮರಾಗುವುದೇನೋ ನಿಜ. ಆದರೆ ನಾವು ಜೀವದಿಂದಿರುವುದಕ್ಕೆ ಅವಕಾಶವಿದೆ. ನಮ್ಮ ಮಕ್ಕಳು ನಮ್ಮ ಕಣ್ಮುಂದೆ ಸಾಯುವುದನ್ನು, ನಮ್ಮ ಮಡದಿ ಮಕ್ಕಳು ನಾಶವಾಗುವುದನ್ನು ತಪ್ಪಿಸಿದಂತಾಗುವುದು; 28ಭೂಪರಗಳ ಮೇಲೂ, ನಮ್ಮ ಪಾಪಗಳಿಗೆ ಹಾಗೂ ನಮ್ಮ ಪೂರ್ವಜರ ಪಾಪಗಳಿಗೆ ತಕ್ಕ ಶಿಕ್ಷೆಯನ್ನು ವಿಧಿಸುವಂಥ ನಮ್ಮ ದೇವರ ಮೇಲೂ ನಮ್ಮ ಪೂರ್ವಜರ ಸರ್ವೇಶ್ವರನ ಮೇಲೂ ಪ್ರಮಾಣಮಾಡಿ ಇದೀಗಲೇ ಈ ನಿರ್ಧಾರವನ್ನು ಕೈಗೊಳ್ಳಬೇಕೆಂದು

ವಿನಂತಿಸುತ್ತೇವೆ," ಎಂದರು. 29ಇಡೀ ಸಭೆಯು ಬಹುವಾಗಿ ಗೋಳಾಡಿತು. ಎಲ್ಲರೂ ಸರ್ವೇಶ್ವರನಾದ ದೇವರಿಗೆ ಉಚ್ಚಸ್ವರದಿಂದ ಮೊರೆಯಿಟ್ಟರು.

30 ಆಗ ಉಜ್ಜೀಯನು: "ಸಹೋದರರೇ, ಧೈರ್ಯ ತಾಳಿ; ಇನ್ನೂ ಐದು ದಿನ ಕಾದಿರೋಣ. ಅಷ್ಟರೊಳಗೆ ನಮ್ಮ ದೇವರಾದ ಸರ್ವೇಶ್ವರ ನಮಗೆ ದಯೆತೋರುವರು. ಅವರು ನಮ್ಮನ್ನು ಸಂಪೂರ್ಣವಾಗಿ ಕೈಬಿಡಲಾರರು. 31ಈ ಅವಧಿಯೊಳಗೆ ಯಾವ ಸಹಾಯವೂ ಬಾರದಿದ್ದಲ್ಲಿ ನೀವು ಹೇಳಿದಂತೆಯೇ ಮಾಡೋಣ," ಎಂದು ಹೇಳಿ ಜನರನ್ನು ಅವರವರ ನಿವಾಸಕ್ಕೆ ಕಳುಹಿಸಿಬಿಟ್ಟನು. ಗಂಡಸರು ಪಟ್ಟಣದ ಗೋಡೆ ಗೋಪುರಗಳನ್ನು ಕಾಯಲು ಹೋದರು. ಮಡದಿ ಮಕ್ಕಳು ತಮ್ಮ ತಮ್ಮ ಮನೆಗಳನ್ನು ಸೇರಿದರು. ಪಟ್ಟಣದಲ್ಲೆಲ್ಲಾ ನಿರಾಶೆಯ ಮಂಕು ಕವಿದಿತ್ತು.

### ಜೂಡಿತಳ ಪರಿಚಯ

**8** ನಡೆದ ಸಂಗತಿಯನ್ನೆಲ್ಲ ಜೂಡಿತಳಿಗೆ ತಿಳಿಸಲಾಯಿತು. ಜೂಡಿತಳು ಮೆರಾರಿಯ ಮಗಳು. ಮೆರಾರಿ ಓಕ್ಸನಿಗೆ, ಓಕ್ಸನು ಜೋಸೆಫನಿಗೆ, ಜೋಸೆಫ್ ಓಜಿಯೆಲನಿಗೆ, ಓಜಿಯೆಲನು ಎಲ್ಕೀಯನಿಗೆ, ಎಲ್ಕೀಯನು ಅನನೀಯನಿಗೆ ಹುಟ್ಟಿದವರು. ಅನನೀಯನು ಗಿದ್ಯೋನನಿಗೆ, ಗಿದ್ಯೋನನು ರಫಾಯಿಮನಿಗೆ, ರಫಾಯಿಮನು ಅಹೀತುಬನಿಗೆ, ಅಹೀತುಬನು ಎಲೀಜನಿಗೆ, ಎಲೀಜನು ಹಿಲ್ಕೀಯನಿಗೆ ಹುಟ್ಟಿದವರು. ಹಿಲ್ಕೀಯನು ಎಲೀಯಾಬನಿಗೆ, ಎಲಿಯಾಬನು ನಥಾನಿಯೆಲನಿಗೆ, ನಥಾನಿಯೆಲನು ಸಲಾಮಿಯೇಲನಿಗೆ, ಸಲಾಮಿಯೇಲನು ಸರಾಸದೇಯನಿಗೆ, ಸರಾಸದೇಯನು ಇಸ್ರಯೇಲನಿಗೆ ಹುಟ್ಟಿದವರು. 2ಅವಳ ಕುಲದವನೂ ಕುಟುಂಬದವನೂ ಆದ ಮನಸ್ಸೆ ಅವಳ ಗಂಡ. ಆತ ಜವೆಗೋದಿಯ ಸುಗ್ಗಿಕಾಲದಲ್ಲಿ ತೀರಿಹೋಗಿದ್ದ. 3ಕೊಯ್ದು ಪೈರಿನ ಕಂತೆಗಳನ್ನು ಕಟ್ಟುವುದನ್ನು ನೋಡಿಕೊಳ್ಳುವ ಉಸ್ತುವಾರಿ ಅವನಿಗಿತ್ತು; ಆಗ ಹೊಲದಲ್ಲೇ ಬಿಸಿಲಿನ ತಾಪಕ್ಕೆ ಸಿಕ್ಕಿಬಿದ್ದು, ಹಾಸಿಗೆ ಹಿಡಿದು ಸತ್ತುಹೋದ. ಅವನು ಸತ್ತಿದ್ದು ಸ್ವಂತ ಊರಾದ ಬೆಥೂಲಿಯದಲ್ಲಿ; ದೋತಾನಿಗೂ ಬಲಮೋನಿಗೂ ನಡುವೆ ಇರುವ ಪೂರ್ವಜರ ಸಮಾಧಿಯಲ್ಲಿ ಅವನಿಗೆ ಭೂಸ್ಥಾಪನೆ ಮಾಡಲಾಗಿತ್ತು. 4ಹೀಗೆ ವಿಧವೆಯಾದ ಜೂಡಿತಳು ಮೂರುವರ್ಷ ನಾಲ್ಕು ತಿಂಗಳವರೆಗೆ ಮನೆಯ ಒಳಗೆ ಇದ್ದಳು. 5ತನಗಾಗಿಯೇ ಒಂದು ಮೇಲು ಕೊಠಡಿಯನ್ನು ಕಟ್ಟಿಕೊಂಡು ಅಲ್ಲಿ ಗೋಣಿತಟ್ಟಿನ ಒಳಉಡಿಗೆಯನ್ನೂ ವಿಧವೆಯ ವಸ್ತ್ರಗಳನ್ನೂ ತೊಟ್ಟುಕೊಂಡು ಶೋಕದ ದಿನಗಳನ್ನು ಉಪವಾಸ, ಪ್ರಾರ್ಥನೆಗಳಿಂದ ಕಳೆಯುತ್ತಿದ್ದಳು. 6ಸಬ್ಬತ್ ಹಾಗೂ ಅದರ ಹಿಂದಿನ ದಿನ, ಹುಣ್ಣಿಮೆ ಹಾಗು ಅದರ ಹಿಂದಿನ ದಿನ ಮತ್ತು ಹಬ್ಬದ ದಿನಗಳಲ್ಲಿ ಮಾತ್ರ ಊಟ ಮಾಡುತ್ತಿದ್ದಳು. 7ಅವಳು ಸುರಸುಂದರಿಯಾಗಿಯೂ ನೋಡುವುದಕ್ಕೆ ರಮಣೀಯವಾಗಿಯೂ ಇದ್ದಳು. ಗಂಡನಿಂದ ಪಡೆದ ಚಿನ್ನಬೆಳ್ಳಿಯ ಆಭರಣಗಳು, ದಾಸದಾಸಿಯರು, ಪಶುಪ್ರಾಣಿಗಳು, ಹೊಲಗದ್ದೆ ಇವೆಲ್ಲಾ ಅವಳಿಗಿತ್ತು. 8ಸ್ವಂತ ಆಸ್ತಿಪಾಸ್ತಿಯಿಂದಲೇ ಜೀವನ ಸಾಗಿಸುತ್ತಿದ್ದಳು. ಅವಳಿಗೆ ವಿರುದ್ಧ ಯಾರೂ ಒಂದೇ ಒಂದು ಮಾತನ್ನೂ ಆಡುತ್ತಿರಲಿಲ್ಲ. ಅವಳಿಗೆ ದೇವರಲ್ಲಿ ಅಷ್ಟೊಂದು ಭಯಭಕ್ತಿಯಿತ್ತು.

### ಊರ ಪ್ರಮುಖರೊಂದಿಗೆ ಜೂಡಿತಳ ಭೇಟಿ

9 ನೀರಿನ ಸರಬರಾಜು ಕಡಿಮೆಯಾಗಿ ಜನರು ಎಷ್ಟು ಕಂಗೆಟ್ಟಿದ್ದಾರೆ, ಊರ ಹಿರಿಯರ ವಿರುದ್ಧ ಎಷ್ಟು ಕಟುವಾಗಿ ದೂರು ಕೊಟ್ಟಿದ್ದಾರೆ ಎಂದು ಜೂಡಿತಳಿಗೆ ಗೊತ್ತಾಯಿತು. ಉಜ್ಜೀಯನು ಜನರಿಗೆ ಸಮಾಧಾನ ಹೇಳಿದ್ದು ಹಾಗು ಐದೇ ದಿನಗಳೊಳಗೆ ಪಟ್ಟಣವನ್ನು ಅಸ್ಸೀರಿಯರಿಗೆ ಬಿಟ್ಟುಕೊಡುವುದಾಗಿ ಶಪಥ ಮಾಡಿದ್ದು, ಇವೆಲ್ಲವನ್ನು ಅವಳಿಗೆ ತಿಳಿಸಲಾಯಿತು. 10ತಕ್ಷಣವೇ ಜೂಡಿತ್ ತನ್ನ ಮನೆವಾರ್ತೆಯವಳನ್ನು ಕಳುಹಿಸಿ, ಚಟ್ರಿ ಮತ್ತು ಚರ್ಮಿ ಎಂಬ ಇಬ್ಬರು ಊರ ಹಿರಿಯರನ್ನು ಕರೆಸಿದಳು. 11ಅವರು ಬಂದಾಗ ಜೂಡಿತ್ ಅವರಿಗೆ ಹೀಗೆಂದಳು:

"ಬೆಥೂಲಿಯದ ಜನನಾಯಕರೇ, ನನಗೆ ಕಿವಿಗೊಡಿ. ನೀವಿಂದು ಮಾಡಿದ್ದು ತಪ್ಪು. ನಿಗದಿತ ಕಾಲದೊಳಗೆ ದೇವರ ಸಹಾಯ ದೊರಕದಿದ್ದರೆ, ಶತ್ರುಗಳಿಗೆ ಪಟ್ಟಣವನ್ನು ಬಿಟ್ಟುಕೊಡುವುದಾಗಿ ಜನರಿಗೆ

ಪ್ರಮಾಣವಚನ ಕೊಟ್ಟದ್ದು ತಪ್ಪು. ಇದರಿಂದ ದೇವರನ್ನು ಕೆಣಕಿದಂತಾಗಿದೆ. 12ದೇವರನ್ನು ಇಂದು ಪರೀಕ್ಷೆ ಮಾಡುವುದಕ್ಕೆ ಜನರ ನಡುವೆ ದೇವರ ಸ್ಥಾನದಲ್ಲಿ ಕುಳಿತುಕೊಳ್ಳುವುದಕ್ಕೆ ನೀವು ಯಾರು? 13ಸರ್ವಶಕ್ತ ಸರ್ವೇಶ್ವರನನ್ನೇ ಪರೀಕ್ಷೆ ಮಾಡುವಷ್ಟು ಧೈರ್ಯ ನಿಮಗೆಲ್ಲಿಂದ ಬಂದಿತು? ನಿಮಗೆ ಏನೂ ಅರ್ಥವಾಗಿಲ್ಲ, ಇನ್ನು ಮುಂದಕ್ಕೂ ಅರ್ಥಮಾಡಿಕೊಳ್ಳುವುದಿಲ್ಲ. 14ಮಾನವ ಹೃದಯದ ಅಂತರಾಳವನ್ನೇ ತಿಳಿಯದ, ಮಾನವನ ವಿವೇಚನಾ ಶಕ್ತಿಯನ್ನೇ ಗ್ರಹಿಸಲಾಗದ ನೀವು, ಎಲ್ಲವನ್ನೂ ಉಂಟುಮಾಡಿದ ದೇವರನ್ನು ಗ್ರಹಿಸಲು ನಿಮ್ಮಿಂದ ಸಾಧ್ಯವೇ? ಅವರ ಮನಸ್ಸನ್ನು ಅಳೆಯಲು, ಅವರ ಯೋಜನೆಗಳನ್ನು ತಿಳಿಯಲು ನಿಮ್ಮಿಂದಾದೀತೆ? ಬೇಡ, ಸಹೋದರರೇ, ದೇವರಾದ ಸರ್ವೇಶ್ವರನನ್ನು ರೇಗಿಸಬೇಡಿ. 15ಬರುವ ಐದು ದಿನಗಳಲ್ಲಿ ನಮಗೆ ನೆರವಾಗಲು ಅವರಿಗೆ ಚಿತ್ತವಿಲ್ಲದಿದ್ದರೂ ತಮಗೆ ಇಷ್ಟಬಂದಷ್ಟು ದಿನ ನಮ್ಮನ್ನು ಕಾಪಾಡಲು ಶಕ್ತರಾಗಿದ್ದಾರೆ; ಅಂತೆಯೇ ಶತ್ರುಗಳ ಸಮ್ಮುಖದಲ್ಲಿ ನಮ್ಮನ್ನು ನಾಶಗೊಳಿಸಲು ಶಕ್ತರಾಗಿ ಇದ್ದಾರೆ. 16ನಮ್ಮ ದೇವರಾದ ಸರ್ವೇಶ್ವರನ ಯೋಚನೆಗಳ ಬಗ್ಗೆ ದೃಢ ಷರತ್ತು ಹಾಕಲು ನಮಗೆ ಹಕ್ಕಿಲ್ಲ. ಮನುಷ್ಯರಂತೆ ದೇವರನ್ನು ಬೆದರಿಸಲಾಗದು; ಮಾನವರಂತೆ ಅವರನ್ನು ಪುಸಲಾಯಿಸಲೂ ಆಗದು. 17ಬದಲಿಗೆ ಅವರು ನಮ್ಮನ್ನು ರಕ್ಷಿಸಲೆಂದು ಸಹನೆಯಿಂದ ಕಾಯೋಣ. ನಮಗೆ ನೆರವಾಗಬೇಕೆಂದು ದೈನ್ಯದಿಂದ ಅವರನ್ನು ಪ್ರಾರ್ಥಿಸೋಣ. ಅವರಿಗೆ ಇಷ್ಟವಿದ್ದರೆ ಖಂಡಿತವಾಗಿಯೂ ಅವರು ನಮ್ಮ ಮೊರೆಯನ್ನು ಕೇಳುವರು.

18 “ನಿಜವಾಗಿಯೂ ಇತ್ತೀಚೆಗೆ, ಈಗಲೂ ಸಹ, ಮಾನವ ಕೈಕೃತಿಗಳಾದ ದೇವರುಗಳನ್ನು ಪೂಜಿಸುವಂಥ ಕುಲವಾಗಲೀ ಕುಟುಂಬವಾಗಲೀ ಊರುಕೇರಿಗಳಾಗಲೀ ನಮ್ಮಲ್ಲಿಲ್ಲ. ಹಿಂದಿನ ಕಾಲದಲ್ಲಿ ಅವರು ಪೂಜಿಸಿದ್ದುಂಟು. 19ಈ ಕಾರಣ ಅವರು ಕೊಲೆಗೂ ಸುಲಿಗೆಗೂ ಗುರಿಯಾದರು. ಶತ್ರುಗಳ ಕೈಯಲ್ಲಿ ಅತೀವ ಸಂಕಟಕೆ ಒಳಗಾಗಿ ನಾಶವಾದರು. 20ನಾವಾದರೋ, ನಮ್ಮ ದೇವರನ್ನು ಬಿಟ್ಟು ಬೇರೆ ಯಾವ ದೇವರನ್ನೂ ಒಪ್ಪುವುದಿಲ್ಲ; ಇಂತಿರಲು, ಅವರು ನಮ್ಮನ್ನು ತೃಣೀಕರಿಸುವುದಿಲ್ಲ, ನಮ್ಮ ರಾಷ್ಟ್ರವನ್ನು ಪರಿತ್ಯಜಿಸುವುದಿಲ್ಲ ಎಂಬ ಭರವಸೆ ನಮಗಿರಬೇಕು.

21 “ಒಂದು ವೇಳೆ, ನಿಮ್ಮ ನಿರೀಕ್ಷೆಯಂತೆ, ಶತ್ರುಗಳು ನಮ್ಮನ್ನು ಆಕ್ರಮಿಸಿಕೊಂಡರೆ, ಆಗ ಇಡೀ ಜುದೇಯವು ಆಕ್ರಮಕ್ಕೊಳಗಾಗುವುದು. ನಮ್ಮ ಪವಿತ್ರ ಕ್ಷೇತ್ರಗಳು ಕೊಳ್ಳೆಯಾಗುವುವು. ಅವುಗಳನ್ನು ಅಪವಿತ್ರಗೊಳಿಸಿದ್ದಕ್ಕಾಗಿ ನಮ್ಮ ರಕ್ತತೆತ್ತಿ ಪರಿಹಾರ ಮಾಡಬೇಕಾಗುವುದು. 22ನಮ್ಮ ಸಹೋದರರ ಕೊಲೆ, ನಮ್ಮ ರಾಷ್ಟ್ರದ ದಾಸ್ಯ, ನಮ್ಮ ಸಂತಾನದ ನಾಶ, ಇವೆಲ್ಲವು ಇತರ ರಾಷ್ಟ್ರಗಳ ಕೈಕೆಳಗಿರುವ ನಮ್ಮ ತಲೆಯ ಮೇಲೆ ಹಿಮ್ಮೆಟ್ಟಿ ಬರುವುವು; ನಮ್ಮನ್ನು ಆಳುವವರು ನಮ್ಮನ್ನು ತುಚ್ಛವಾಗಿ ಎಣಿಸುವರು. ನಮ್ಮನ್ನು ನಿಂದೆ ಅವಮಾನಕ್ಕೆ ಗುರಿಮಾಡುವರು. 23ನಾವು ಶರಣಾಗತರಾಗುವುದರಿಂದ ಅವರ ವಿಶ್ವಾಸವನ್ನು ಗಳಿಸಲಾಗುವುದಿಲ್ಲ. ಇಲ್ಲ, ನಮ್ಮ ದೇವರಾದ ಸರ್ವೇಶ್ವರ, ನಾವು ಶರಣಾಗತರಾದರೆ, ನಮ್ಮನ್ನು ನಾಚಿಕೆ ಗೇಡುಮಾಡುವರು. 24ಆದ್ದರಿಂದ ಸಹೋದರರೇ, ನಮ್ಮ ಅಣ್ಣತಮ್ಮಂದಿರಿಗೆ ಒಳ್ಳೆಯ ಆದರ್ಶವನ್ನು ನೀಡೋಣ. ಏಕೆಂದರೆ ಅವರ ಅಳಿವು-ಉಳಿವು ನಮ್ಮ ಕೈಯಲ್ಲಿದೆ; ನಮ್ಮ ದೇವಾಲಯ, ಗರ್ಭಗುಡಿ, ಬಲಿಪೀಠ, ಎಲ್ಲವೂ ನಮ್ಮ ಜವಾಬ್ದಾರಿಯಾಗಿದೆ.

25 “ಇಂತಿರಲು, ನಮ್ಮ ಪೂರ್ವಜರನ್ನು ಪರೀಕ್ಷಿಸಿದಂತೆ ಈಗ ನಮ್ಮನ್ನು ಪರೀಕ್ಷಿಸುತ್ತಿರುವ ದೇವರಿಗೆ ಕೃತಜ್ಞತೆಗಳನ್ನು ಸಲ್ಲಿಸೋಣ. 26ದೇವರು ಅಬ್ರಹಾಮನೊಂದಿಗೆ ಹೇಗೆ ನಡೆದುಕೊಂಡರು? ಇಸಾಕನನ್ನು ಹೇಗೆ ಪರೀಕ್ಷಿಸಿದರು? ಸಿರಿಯಾದ ಮೆಸಪಟೋಮಿಯಾದಲ್ಲಿ ತನ್ನ ಸೋದರಮಾವನಾದ ಲಾಬಾನನ ಕುರಿಮಂದೆಯನ್ನು ಕಾಯುತ್ತಿದ್ದ ಯಕೋಬನಿಗೆ ಏನಾಯಿತು? ಎಂಬುದನ್ನು ಜ್ಞಾಪಕಕ್ಕೆ ತಂದುಕೊಳ್ಳಿ. 27ಅವರ ಅಂತರಂಗವನ್ನು ಪರಿಶೋಧಿಸುವ ಸಲುವಾಗಿ ದೇವರು ಅವರನ್ನು ಪರೀಕ್ಷಿಸಿದರು. ಅಂತೆಯೇ ಅವರು ಈಗ ನಮ್ಮ ಮೇಲೆ ಸೇಡನ್ನು ತೀರಿಸುತ್ತಿಲ್ಲ; ಬದಲಿಗೆ ತಮಗೆ ಪ್ರಿಯವಾದವರಿಗೆ ಎಚ್ಚರಿಕೆ ನೀಡುತ್ತಿದ್ದಾರೆ,” ಎಂದಳು.

28 ಆಗ ಉಜ್ಜೀಯನು, “ನೀನು ಹೇಳಿದ್ದು ಎಲ್ಲವೂ ನಿನ್ನ ನಿಷ್ಕಪಟ ಹೃದಯದ ಅಂತರಾಳದಿಂದ ಹೊರಬಂದಿದೆ. ಯಾರೂ ಅದಕ್ಕೆ ವಿರುದ್ಧ ಮಾತೆತ್ತುವಂತಿಲ್ಲ. 29ನೀನು ಬುದ್ಧಿಶಕ್ತಿಯನ್ನು ತೋರಿಸಿದ್ದು ಇಂದೇ ಮೊದಲಲ್ಲ, ಚಿಕ್ಕಂದಿನಿಂದಲೂ ನೀನು ಎಷ್ಟೋ ಚುರುಕು ಬುದ್ಧಿಯುಳ್ಳವಳು ಎಂದು ಜನರಿಗೆ

ಗೊತ್ತು. 30ನೀರಡಿಕೆಯಿಂದ ಕಂಗಾಲಾಗಿದ್ದ ಜನರು ನಮ್ಮನ್ನು ಬಲವಂತಪಡಿಸಿದ್ದರಿಂದ ನಾವು ಅವರಿಗೆ
ಹಾಗೆ ಮಾತುಕೊಟ್ಟು ದೃಢ ಶಪಥಮಾಡಿದೆವು. 31ನೀನು ಭಯಭಕ್ತಿಯುಳ್ಳ ಮಹಿಳೆ. ನಮ್ಮ ಬಾವಿಗಳು
ತುಂಬುವಷ್ಟು ಮಳೆಗರೆಯಲಿ, ನಾವು ಸೊರಗಿಹೋಗದೆ ಬದುಕುವಂತಾಗಲಿ ಎಂದು ಸರ್ವೇಶ್ವರನಲ್ಲಿ
ಪ್ರಾರ್ಥಿಸು," ಎಂದನು.

32 ಆಗ ಜೂಡಿತ್, "ಕೇಳಿ, ನಾನು ಏನನ್ನೋ ಮಾಡಬೇಕೆಂದಿದ್ದೇನೆ. ಯುಗಯುಗಾಂತರಕ್ಕೂ
ನಮ್ಮ ಸಂತತಿಯವರಿಗೆ ಅನುವಂಶಿಕವಾಗಿ ಜ್ಞಾಪಕಾರ್ಥವಾಗಿರುವಂಥ ಸಂಗತಿಯಿದು. 33ಈ ರಾತ್ರಿ ನೀವು
ಊರಿನ ಹೆಬ್ಬಾಗಿಲ ಬಳಿ ಇರಬೇಕು. ನಾನು ನನ್ನ ಸೇವಕಿಯೊಂದಿಗೆ ಆಚೆ ಹೋಗುತ್ತೇನೆ. ಶತ್ರುಗಳಿಗೆ ನಮ್ಮ
ಪಟ್ಟಣವನ್ನು ಬಿಟ್ಟುಕೊಡಲು ಗೊತ್ತು ಮಾಡಿರುವ ಅವಧಿಯೊಳಗೆ, ಇಸ್ರಯೇಲನ್ನು ರಕ್ಷಿಸಲು ದೇವರು
ನನ್ನನ್ನು ಉಪಯೋಗಿಸುವರು. 34ನಾನು ಏನು ಮಾಡಬೇಕೆಂದಿದ್ದೇನೆಂದು ಕೇಳಬೇಡಿ. ನನ್ನ ಕೆಲಸ
ಮುಗಿಯುವವರೆಗೆ ನಿಮಗೇನೂ ನಾನು ಹೇಳುವುದಿಲ್ಲ," ಎಂದಳು. 35ಆಗ ಉಜ್ಜೀಯನು ಮತ್ತು
ಪ್ರಮುಖರು, "ಶಾಂತಿಸಮಾಧಾನದಿಂದ ತೆರಳು, ನಮ್ಮ ಶತ್ರುಗಳ ಮೇಲೆ ಸೇಡು ತೀರಿಸಲು ಸರ್ವೇಶ್ವರ
ನಿನಗೆ ದಾರಿತೋರಿಸಲಿ," ಎಂದು ಹೇಳಿ, 36ಮಹಡಿಯಿಂದಿಳಿದು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

**ಜೂಡಿತಳ ಪ್ರಾರ್ಥನೆ**

**9** ಜೂಡಿತ್ ನೆಲದ ಮೇಲೆ ಅಧೋಮುಖವಾಗಿ ಬಿದ್ದು ಹಣೆಗೆ ಬೂದಿ ಹಚ್ಚಿಕೊಂಡಳು. ಒಳ್ಳೆಯ
ಬಟ್ಟೆಗಳನ್ನು ತೆಗೆದಿಟ್ಟು, ಗೋಣಿತಟ್ಟನ್ನು ಮಾತ್ರ ಉಳಿಸಿಕೊಂಡು ಉಚ್ಚಸ್ವರದಿಂದ ದೇವರಿಗೆ ಪ್ರಾರ್ಥನೆ
ಮಾಡಿದಳು. ಅದೇ ಸಮಯದಲ್ಲಿ ಜೆರುಸಲೇಮಿನ ದೇವಾಲಯದಲ್ಲಿ ಸಂಧ್ಯಾಧೂಪಾರತಿ ಬೆಳಗುತ್ತಿದ್ದರು.
ಆಗ ಜೂಡಿತ್ ಹೇಳಿದ್ದೇನೆಂದರೆ:

2 "ಸರ್ವೇಶ್ವರಾ, ನಮ್ಮ ಪೂರ್ವಜ
    ಸಿಮೆಯೋನನ ದೇವರೇ,
  ಪರಕೀಯರ ಮೇಲೆ ಸೇಡು ತೀರಿಸಲು
    ಆತನಿಗೆ ನೀ ಕತ್ತಿಯನ್ನಿತ್ತೆ.
  ಅವಮಾನಗೊಳಿಸಿದರವರು ಕನ್ಯೆಗೆ
    ಅತ್ಯಾಚಾರವೆಸಗಿ
  ಮಾನಭಂಗಮಾಡಿದರು ಆಕೆಯನ್ನು ಬಟ್ಟೆ
    ಬರಿದುಮಾಡಿ
  ನಾಚಿಕೆಗೀಡುಮಾಡಿದರು ಆಕೆಯ
    ಉದರವನ್ನು ಕೆಡಿಸಿ
  'ಮಾಡಕೂಡದೆಂದು' ನೀ ವಿಧಿಸಿದರೂ
    ಎಸಗಿದರು ಹೀನಕೃತಿ.
3 ಈ ಕಾರಣ ಹತ್ಯೆಗೀಡುಮಾಡಿದೆ ಅವರ
    ಅರಸರನೆ
  ರಕ್ತದಿಂದ ತೋಯಿಸಿದೆ ಅವರು ಹೇಸಿಗೆ
    ಮಾಡಿದ ಹಾಸಿಗೆಯನೆ.
  ಸದೆಬಡಿದೆ ನೀ ದಾಸರನು
    ದಣಿಗಳೊಂದಿಗೆ
  ಸದೆಬಡಿದೆ ಅವರನು ಅವರ
    ಸಿಂಹಾಸನಗಳ ಮೇಲೆಯೆ.
4 ಅವರ ಸತಿಯರನ್ನು ಅಪಹರಿಸಲು

ಶತ್ರುಗಳಿಗೆ ಬಿಟ್ಟೆ
ಹೆಣ್ಣುಮಕ್ಕಳನ್ನು ಸೆರೆಹಿಡಿಯಲು ಅವರಿಗೆ
ಕೊಟ್ಟೆ
ಅವರ ಕೊಳ್ಳೆಯನ್ನು ಪಾಲು
ಮಾಡಿಕೊಳ್ಳಲು
ಪ್ರಿಯ ಇಸ್ರಯೇಲರಿಗೆ ಬಿಟ್ಟೆ.
ನಿನ್ನಲ್ಲಿ ಭಕ್ತಿವಿಶ್ವಾಸವಿಟ್ಟ ಮಕ್ಕಳು
ಅವರೇ
ತಮ್ಮಲ್ಲಿ ಹೇಸಿಗೆ ಮಾಡಿದವರನ್ನು
ದ್ವೇಷಿಸಿದವರು ಅವರೇ.
ನಿಮ್ಮ ಆಶ್ರಯಕ್ಕಾಗಿ ಮೊರೆಯಿಟ್ಟವರು
ಈ ಇಸ್ರಯೇಲರೇ.
ಓ ದೇವಾ, ನನ್ನ ದೇವಾ,
ಈ ವಿಧವೆಯ ಪ್ರಾರ್ಥನೆಯನ್ನಾಲಿಸಯ್ಯಾ !
5 ನಿನ್ನೆ, ಇಂದು, ನಾಳೆ, ಎಂಬುದು ನಿನ್ನದೇ.
ಇರುವುದನು, ಬರುವುದನು
ಯೋಚಿಸುವವನು ನೀನೇ.
ಗತಿಸಿಹೋದುದನು ಆಲೋಚಿಸಿದಾತನು
ನೀನೇ.
6 ನಿರೀಕ್ಷೆಯುಳ್ಳದ್ದಾಗಿವೆ ನಿನ್ನ
ನಿರ್ಧಾರಗಳೆಲ್ಲ
ಸಿದ್ಧವಿದ್ದು 'ಇಗೋ ಇಲ್ಲಿದ್ದೇವೆ'
ಎನ್ನುವುವು ಅವೆಲ್ಲ.
ಪೂರ್ವಸಿದ್ಧವಾದವು ನಿನ್ನ ಮಾರ್ಗಗಳೆಲ್ಲ
ಪೂರ್ವವಿವೇಚನೆಯಿಂದಾದವು ನಿನ್ನ
ತೀರ್ಪುಗಳೆಲ್ಲ.
7 ಇಗೋ ನೋಡು, ಅಸ್ಸೀರಿಯದವರು !
ಮಹತ್ತಾದ ಸೈನ್ಯ ತಮಗಿದೆಯೆಂದು
ಕೊಚ್ಚಿಕೊಳ್ಳುತಿಹರು
ಕುದುರೆಗಳು, ರಾಹುತರು,
ಇರುವುವೆಂದು ಮೆರೆಯುತಿಹರು.
ಕಾಲಾಳುಗಳ ಸೇನೆ ಶಕ್ತಿಯಲಿ ಹಿಗ್ಗುತಿಹರು
ಬಿಲ್ಲು ಗುರಾಣಿಗಳನೆ, ಕಲ್ಲು ಕವಣೆಗಳನೆ
ನೆಚ್ಚಿಕೊಂಡಿಹರು.
ನಿನ್ನನಾದರೋ ಒಪ್ಪದಿಹರು
ಸರ್ವೇಶ್ವರನೆಂದು,
ಯುದ್ಧಪಡೆಗಳನು ಪುಡಿಪುಡಿ
ಮಾಡುವವನು ನೀನೆಂದು,
'ಸರ್ವೇಶ್ವರ' ಎಂಬ ಬಿರುದು ನಿನಗೆ
ಮೀಸಲೆಂದು.

8 ಅವರ ಹಿಂಸಾಚಾರವನು ನಿಲ್ಲಿಸು ದೇವಾ,
ನಿನ್ನ ಶಕ್ತಿಯಿಂದ
ಅವರ ಶೌರ್ಯವನು ಕರಗಿಸು ನಿನ್ನ
ಕೋಪಾಗ್ನಿಯಿಂದ.
ಏಕೆನೆ, ಹವಣಿಸುತಿಹರು
ಪುಣ್ಯಕ್ಷೇತ್ರಗಳನು ಹೊಲಸಾಗಿಸಲು,
ನಿನ್ನ ಮಹಿಮಾನಾಮದ ಗುಡಾರವನು
ಮಲಿನಗೊಳಿಸಲು,
ನಿನ್ನ ಬಲಿಪೀಠದ ಕೊಂಬುಗಳನು
ಮುರಿದುಹಾಕಲು.
9 ಅವರ ಗರ್ವವನು, ದೇವಾ, ಗಮನಿಸು
ನಿನ್ನ ಕೋಪಾಗ್ನಿಯನು ಅವರ ಶಿರಗಳ
ಮೇಲೆ ಸುರಿಸು
ನನ್ನ ಮನದಾಲೋಚನೆಯನು
ಕೈಗೂಡಿಸಲು
ನನ್ನ ಕೈಗಳನು ಬಲಪಡಿಸು.
10 ದಣಿಯನು, ದಾಸನನು
ಅರಸನನು, ಸಿಂಹಾಸನವನು
ಕೆಡವಿಬಿಡು ನಿನ್ನ ಮಾತಿನ ಮೋಡಿಯಿಂದ,
ಅಡಗಿಸಿಬಿಡು ಅವರ ಸೊಕ್ಕನು
ಈ ಮಹಿಳೆಯ ಕೈಯಿಂದ.
11 ನಿನ್ನ ಶಕ್ತಿ ದೇವಾ, ಅಂಕೆಸಂಖ್ಯೆಗಳಲ್ಲಿಲ್ಲ
ನಿನ್ನ ಶೌರ್ಯ ಶೂರರ
ಸಾಮರ್ಥ್ಯದಲ್ಲಿಲ್ಲ.
ಏಕೆನೆ ದೀನದಲಿತರ ದೇವ ನೀನು
ದುರ್ಬಲರ, ಶೋಷಿತರ ಸಹಾಯಕ ನೀನು.
ದಿಕ್ಕಿಲ್ಲದವರ ಉದ್ಧಾರಕ,
ನಿರಾಶೆಗೊಂಡವರ ಆಶ್ರಯ ನೀನು.
12 ದಯಮಾಡು, ದಯಮಾಡು,
ನನ್ನ ಪಿತೃಗಳ ದೇವಾ
ಇಸ್ರಯೇಲಿಗೆ ಸ್ವಾಸ್ತ್ಯವನ್ನೀಯುವ ದೇವಾ
ಭೂಪರಗಳ ಒಡೆಯ, ಜಲರಾಶಿಗಳ
ಸೃಷ್ಟಿಕರ್ತ
ಸೃಷ್ಟಿಸಮಸ್ತಗಳ ರಾಜ, ಆಲಿಸು ನನ್ನೀ
ಪ್ರಾರ್ಥನೆಯ.
13 ನಿನ್ನ ಒಡಂಬಡಿಕೆಯನು, ನಿನ್ನ ಈ
ಶ್ರೀನಿವಾಸವನು,
ಸಿಯೋನ್ ಪರ್ವತವನು, ನಿನ್ನವರ
ಮನೆತನವನು,
ನಾಶಮಾಡಲು ಮಾಡಿಹರು ಕ್ರೂರ

ಯೋಜನೆಗಳನು.
ಗಾಯಗೊಳಿಸಿ ಸಾಯಿಸಲು
ಈ ಶತ್ರುಗಳನು
ಕರುಣಿಸೆನಗೆ ಕಪಟ ನಾಲಗೆಯೊಂದನು.
14 ತೋರಿಸೀಗ ಸರ್ವಜಾತಿ ಜನಾಂಗಗಳಿಗೆ
ಸರ್ವಶಕ್ತ, ಸರ್ವವಲ್ಲಭ, ಸರ್ವೇಶ್ವರ
ನೀನೆಂದೇ;
ಇಸ್ರಯೇಲ್ ಕುಲಕ್ಕೆ ಸಂರಕ್ಷಕನಾರೂ
ಇಲ್ಲ ನೀನಲ್ಲದೆ.

## ಜೂಡಿತ್ ಹೊಲೊಫರ್ನೆಸನ ಪಾಳೆಯದಲ್ಲಿ

**10** 1–2 ಮೇಲೆ ಹೇಳಿದಂತೆ ಇಸ್ರಯೇಲಿನ ದೇವರಲ್ಲಿ ಜೂಡಿತ್ ಪ್ರಾರ್ಥನೆ ಮಾಡಿದಳು. ಪ್ರಾರ್ಥನೆ
ಮುಗಿದ ನಂತರ ನೆಲದಿಂದ ಎದ್ದು ತನ್ನ ಸೇವಕಿಯನ್ನು ಕರೆದುಕೊಂಡು ಶೃಂಗಾರದ ಕೋಣೆಗೆ
ಇಳಿದುಹೋದಳು. ಸಬ್ಬತ್ ಹಾಗೂ ಹಬ್ಬದ ದಿನಗಳಲ್ಲಿ ಆ ಕೋಣೆಗೆ ಹೋಗುವುದು ಅವಳ ವಾಡಿಕೆ.
3ಅಲ್ಲಿ ತಾನು ಉಟ್ಟುಕೊಂಡಿದ್ದ ಗೋಣಿತಟ್ಟನ್ನೂ ವಿಧವೆಯ ವಸ್ತ್ರಗಳನ್ನೂ ತೆಗೆದುಹಾಕಿದಳು. ಸ್ನಾನಮಾಡಿ,
ಯಥೇಚ್ಛವಾಗಿ ಪರಿಮಳ ತೈಲವನ್ನು ಹಚ್ಚಿಕೊಂಡು, ತಲೆಯನ್ನು ಬಾಚಿ ಕೇಶಕಿರೀಟವನ್ನು ಧರಿಸಿಕೊಂಡಳು.
ಗಂಡ ಮನಸ್ಸೆ ಜೀವದಿಂದಿದ್ದಾಗ ಹಾಕಿಕೊಳ್ಳುತ್ತಿದ್ದ ನಯವಾದ ಬಟ್ಟೆಬರೆಗಳನ್ನು ತೊಟ್ಟುಕೊಂಡಳು. 4ಕೈಗೆ
ಬಳೆಗಳು, ಕುತ್ತಿಗೆಗೆ ಕಂಠಹಾರಗಳು, ಬೆರಳಿಗೆ ಉಂಗುರಗಳು, ಕಿವಿಗೆ ಓಲೆಗಳು, ಕಾಲಿಗೆ ಪಾದರಕ್ಷೆಗಳು, ಈ
ಒಡವೆ ವಸ್ತುಗಳನ್ನೆಲ್ಲ ಧರಿಸಿಕೊಂಡಳು. ಎಂಥಾ ಗಂಡಸಿನ ದೃಷ್ಟಿಯನ್ನೂ ಸೆಳೆದು ಮರುಳಾಗಿಸುವಷ್ಟು
ಶೃಂಗಾರ ಮಾಡಿಕೊಂಡಳು. 5ಅನಂತರ, ದ್ರಾಕ್ಷಾರಸ ತುಂಬಿದ ಬುದ್ದಲಿ, ಎಣ್ಣೆ ತುಂಬಿದ ಸೀಸೆ,
ಜವೆಗೋದಿಯ ರೊಟ್ಟಿ, ಒಣಹಣ್ಣುಗಳಿಂದ ಮಾಡಿದ ಒಬ್ಬಟ್ಟು ಇವುಗಳನ್ನು ಚೀಲದಲ್ಲಿ ತುಂಬಿ ಸೇವಕಿಯ
ಕೈಗೆ ಕೊಟ್ಟಳು. ಸೇವಕಿಗೂ ಬೇಕಾದಷ್ಟು ತಿಂಡಿಯನ್ನು ಒದಗಿಸಿದಳು. 6ಇಬ್ಬರೂ ಹೊರಟು ಬೆಥೂಲಿಯದ
ಊರಬಾಗಿಲಿಗೆ ಬಂದರು. ಅಲ್ಲಿ ಬಾಬ್ರಿ ಮತ್ತು ಚರ್ಮಿ ಎಂಬ ಹಿರಿಯರೊಡನೆ ಉಜ್ಜೀಯನಿದ್ದನು.
7ಬದಲಾಗಿದ್ದ ಅವಳ ವೇಷಭೂಷಣಗಳನ್ನು ಕಂಡು, ಅವಳ ರೂಪಲಾವಣ್ಯಕ್ಕೆ ಬೆರಗಾಗಿ ಅವರು:
8 "ನಮ್ಮ ಪೂರ್ವಜರ ದೇವರು
ತಮ್ಮ ಕೃಪಾಕಟಾಕ್ಷವನ್ನು ನಿನ್ನ ಮೇಲಿರಿಸಲಿ !
ಅವರು ನಿನ್ನ ಅಂತರಂಗದ ಆಲೋಚನೆಗಳನ್ನು
ಯಶಸ್ವಿಗೊಳಿಸಲಿ
ಇಸ್ರಯೇಲಿನ ಸಂತತಿಗೆ ಮಹಿಮೆಯಾಗಲಿ
ಜೆರುಸಲೇಮಿಗೆ ಅನಂತ ಮಹಿಮೆಯಾಗಲಿ!"
ಎಂದರು.

9 ಜೂಡಿತ್ ದೇವರನ್ನು ಆರಾಧಿಸಿ, ಅನಂತರ ಜನರಿಗೆ, "ನೀವು ನನಗೆ ತಿಳಿಯಪಡಿಸಿದ ನಿಮ್ಮ
ಆಶೋತ್ತರಗಳನ್ನು ಈಡೇರಿಸಲು ನಾನು ಆಚೆ ಹೋಗುವಂತೆ ಊರಬಾಗಿಲನ್ನು ತೆರೆಯಿರಿ," ಎಂದಳು.
ಅವರು ಅಂತೆಯೇ ಬಾಗಿಲನ್ನು ತೆರೆಯಲು ಇಬ್ಬರು ಯುವಕರಿಗೆ ಆಜ್ಞೆಯಿತ್ತರು. 10ಬಾಗಿಲನ್ನು ತೆರೆಯಲು,
ಜೂಡಿತ್ ತನ್ನ ಸೇವಕಿಯೊಡನೆ ಹೊರಕ್ಕೆ ಹೋದಳು. ಅವಳು ಆ ಗುಡ್ಡದ ಕೆಳಗೆ ಇಳಿದುಹೋಗಿ
ಮರೆಯಾಗುವವರೆಗೂ ಜನರು ನೋಡಿಕೊಂಡೇ ಇದ್ದರು.

11 ಜೂಡಿತ್ ಸೇವಕಿಯ ಸಮೇತ ಕಣಿವೆಯ ದಾರಿಯಲ್ಲಿ ನೇರವಾಗಿ ನಡೆಯುತ್ತಿರಲು,
12ಅಸ್ಸೀರಿಯದ ಭದ್ರತಾಪಡೆಯವರು ಅವರನ್ನು ಹಿಡಿದು ನಿಲ್ಲಿಸಿ, "ನೀನು ಯಾವ ಕಡೆಯವಳು? ಎಲ್ಲಿಂದ
ಬಂದೆ? ಈಗ ಎಲ್ಲಿಗೆ ಪ್ರಯಾಣ?" ಎಂದೆಲ್ಲ ಪ್ರಶ್ನಿಸಿದರು. ಅದಕ್ಕೆ ಜೂಡಿತ್, "ನಾನು ಹಿಬ್ರು

ಮನೆತನದವಳು. ನಮ್ಮ ಜನರು ಶೀಘ್ರದಲ್ಲಿ ನಿಮಗೆ ಬಲಿಪಶುಗಳಾಗಲಿದ್ದಾರೆ. ಅವರಿಂದ ತಪ್ಪಿಸಿಕೊಂಡು ಬಂದಿದ್ದೇನೆ. 13ಈಗ ನಿಮ್ಮ ಸೇನಾಧಿಪತಿಯಾಗಿರುವ ಹೊಲೊಫರ್ನೆಸನನ್ನು ಕಾಣಲು ಹೋಗುತ್ತಿದ್ದೇನೆ. ಅವರಿಗೆ ಗುಟ್ಟಾದ ಸಂಗತಿಯೊಂದನ್ನು ತಿಳಿಸಬೇಕಾಗಿದೆ. ಒಬ್ಬನೂ ಸಾಯದಂತೆ, ಒಂದು ಜೀವವನ್ನೂ ಕಳೆದುಕೊಳ್ಳದಂತೆ ಗುಡ್ಡಗಾಡಿನಲ್ಲಿರುವ ಎಲ್ಲಾ ಜನರನ್ನು ಆಕ್ರಮಿಸಿಕೊಳ್ಳಲು ಸಾಧ್ಯವಾಗುವಂತೆ ಅವರಿಗೊಂದು ಉಪಾಯವನ್ನು ತೋರಿಸುತ್ತೇನೆ," ಎಂದಳು.

14 ಭದ್ರತಾಪಡೆಯವರು ಅವಳು ಹೇಳಿದ್ದನ್ನು ಕೇಳುತ್ತಾ, ಆಕೆಯ ಸೌಂದರ್ಯಕ್ಕೆ ನಿಬ್ಬೆರಗಾಗಿ ಎವೆಯಿಕ್ಕದೆ ನಿಂತುಕೊಂಡರು. 15 "ಸದ್ಯ, ನೀನಾಗಿಯೇ ಬಂದು ನಮ್ಮ ಒಡೆಯನನ್ನು ಕಾಣಲು ಹೋಗುತ್ತಿದ್ದೀಯೆ, ಬದುಕಿಕೊಂಡೆ. ನೀನು ಅವನ ಪಾಳೆಯಕ್ಕೆ ನೇರವಾಗಿ ನಡೆ. ನಮ್ಮ ಜನರು ನಿನ್ನನ್ನು ಕರೆದುಕೊಂಡು ಹೋಗಿ ಅವನಿಗೆ ಒಪ್ಪಿಸುವರು. 16ಅವನ ಸನ್ನಿಧಿಯಲ್ಲಿ ನಿಲ್ಲಲು ನೀನು ಹೆದರಬೇಕಾಗಿಲ್ಲ. ನಮಗೆ ಈಗ ನೀನು ಹೇಳಿದ್ದೆಲ್ಲವನ್ನೂ ಅವನಿಗೆ ತಿಳಿಸು. ಅವನು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುವನು," ಎಂದು ಹೇಳಿ, 17ಅವಳ ಮತ್ತು ಸೇವಕಿಯ ಜೊತೆಯಲ್ಲಿ ನೂರು ಜನರನ್ನು ಕಳುಹಿಸಿದರು. ಅವರು ಜೂಡಿತಳನ್ನು ಹೊಲೊಫರ್ನೆಸನ ಪಾಳೆಯಕ್ಕೆ ಕರೆದೊಯ್ದರು.

18 ಜೂಡಿತಳ ಆಗಮನದ ಸಂಗತಿ ಪಾಳೆಯದಲ್ಲೆಲ್ಲ ಹಬ್ಬಿ, ಎಲ್ಲರ ಕುತೂಹಲವನ್ನು ಕೆರಳಿಸಿತು. ಅವಳು ಇನ್ನೂ ಅಪ್ಪಣೆಪಡೆಯಲು ಪಾಳೆಯದ ಮುಂದೆ ಕಾದು ನಿಂತಿದ್ದಾಗ, ಜನರ ಗುಂಪು ಅವಳನ್ನು ಸುತ್ತುವರಿಯಿತು. 19ಅವರು ಆಕೆಯ ಚೆಲುವನ್ನು ಬಹುವಾಗಿ ಮೆಚ್ಚಿಕೊಂಡರು. ಇದರಿಂದ ಇಸ್ರಯೇಲರ ಬಗ್ಗೆ ಅವರಿಗೆ ಅಭಿಮಾನವೂ ಹುಟ್ಟಿತು: "ಇಂಥ ಸ್ತ್ರೀಯರಿರುವ ಜನಾಂಗವನ್ನು ಯಾರು ತಾನೇ ತಿರಸ್ಕರಿಸಲು ಸಾಧ್ಯ?" ಎಂದುಕೊಳ್ಳುತ್ತಿದ್ದರು ಕೆಲವರು. ಇತರರಾದರೋ, "ಅವರಲ್ಲಿ ಯಾರನ್ನೂ ಜೀವದಿಂದ ಬಿಡದಿದ್ದರೆ ಮೇಲು; ಯಾರಾದರೊಬ್ಬರು ಅವರ ಹತ್ತಿರಕ್ಕೆ ಹೋದರೆ ಇಡೀ ವಿಶ್ವವನ್ನೇ ತಮ್ಮ ಕೈಬೆರಳಿನ ಸುತ್ತ ಸೆಳೆದುಕೊಂಡು ಬಿಡುತ್ತಾರೆ!" ಎಂದರು.

20 ಹೊಲೊಫರ್ನೆಸನ ಅಂಗರಕ್ಷಕರೂ ಸಹಾಯಕಪಡೆಯವರೂ ಆಚೆಬಂದು ಜೂಡಿತಳನ್ನು ಪಾಳೆಯದೊಳಕ್ಕೆ ಕರೆದೊಯ್ದರು. 21ಬಂಗಾರದ, ಕೆನ್ನೀಲಿ ಬಣ್ಣದ ಹಾಗೂ ಅಂದವಾದ ಮುತ್ತುರತ್ನಗಳಿಂದ ಅಲಂಕೃತವಾದ ಚಪ್ಪರದಡಿಯಲ್ಲಿ ಹೊಲೊಫರ್ನೆಸ್ ಒಂದು ಮಂಚದ ಮೇಲೆ ಮಲಗಿದ್ದನು. 22ಜೂಡಿತ್ ಬಂದಿದ್ದಾಳೆಂದು ಜನರು ಅವನಿಗೆ ತಿಳಿಸಲು ಅವನು ಎದ್ದು ಡೇರೆಯ ಬಾಗಿಲ ಬಳಿ ಬಂದನು. ಬೆಳ್ಳಿಯ ದೀಪಸ್ತಂಭಗಳನ್ನು ಹೊತ್ತ ಆಳುಗಳು ಅವನ ಮುಂದೆ ಇದ್ದರು. 23ಸೇನಾಧಿಪತಿಯ ಹಾಗು ಅವನ ಸಹಾಯಕರ ಸನ್ನಿಧಿಯಲ್ಲಿ ಜೂಡಿತ್ ಬಂದು ನಿಂತಾಗ ಅವರು ಅವಳ ರೂಪಲಾವಣ್ಯಗಳನ್ನು ಕಂಡು ಬೆಬ್ಬರಗಾದರು. ಜೂಡಿತ್ ಸೇನಾಧಿಪತಿಗೆ ಸಾಷ್ಟಾಂಗವೆರಗಿದಳು. ತಕ್ಷಣ ಸೇವಕರು ಆಕೆಯನ್ನು ಮೇಲಕ್ಕೆತ್ತಿದರು.

### ಹೊಲೊಫರ್ನೆಸನೊಂದಿಗೆ ಪ್ರಥಮ ಭೇಟಿ

**11** "ಮಹಿಳೆಯೇ, ಧೈರ್ಯದಿಂದಿರು. ಹೆದರಬೇಡ, ವಿಶ್ವದೊಡೆಯ ನೆಬೂಕದ್ನೆಚ್ಚರನಿಗೆ ಸೇವೆಮಾಡುವ ಯಾವ ವ್ಯಕ್ತಿಯನ್ನೂ ನಾನು ನೋಯಿಸುವಂಥವನಲ್ಲ. 2ಈಗಲೂ ಸಹ ಗುಡ್ಡಗಾಡಿನಲ್ಲಿರುವ ನಿಮ್ಮ ಜನರು ನನ್ನನ್ನು ಹೀಯಾಳಿಸದಿದ್ದರೆ, ಒಂದೇ ಭರ್ಜಿಯನ್ನಾಗಲೀ ನಾನು ಅವರಿಗೆದುರಾಗಿ ಎತ್ತುತ್ತಿರಲಿಲ್ಲ. ಇದು ಅವರ ತಪ್ಪು, ನನ್ನದಲ್ಲ. 3ಆದರೆ ನೀನೇಕೆ ತಪ್ಪಿಸಿಕೊಂಡು ಇಲ್ಲಿಗೆ ಬಂದಿರುವೆ? – ಆಗಲಿ; ಸದ್ಯ ನೀನು ಬದುಕಿಕೊಂಡೆ. ಈ ರಾತ್ರಿ ಮಾತ್ರವಲ್ಲ, ಹಲವಾರು ರಾತ್ರಿಗಳಲ್ಲಿ ಸುರಕ್ಷಿತವಾಗಿರುವೆ. 4ನಿನ್ನನ್ನು ಯಾರೂ ಬಾಧಿಸುವುದಿಲ್ಲ; ಬದಲಿಗೆ, ನನ್ನ ಒಡೆಯ ನೆಬೂಕದ್ನೆಚ್ಚರನ ಸೇವೆ ಮಾಡುವವರನ್ನು ಚೆನ್ನಾಗಿ ನೋಡಿಕೊಳ್ಳುವಂತೆ ನಿನ್ನನ್ನೂ ನೋಡಿಕೊಳ್ಳುವರು," ಎಂದು ಹೊಲೊಫರ್ನೆಸ್ ಉಸುರಿದನು.

5 ಅದಕ್ಕೆ ಜೂಡಿತ್, "ದಯಮಾಡಿ, ತಮ್ಮ ದಾಸಿ ಹೇಳುವುದನ್ನು ಕೇಳಿ. ಸನ್ನಿಧಾನದಲ್ಲಿ ಮಾತನಾಡಲು ತಮ್ಮ ದಾಸಿಗೆ ಅಪ್ಪಣೆಯಾಗಬೇಕು. ಈ ರಾತ್ರಿ ಒಡೆಯರಾದ ತಮಗೆ ಒಂದೇ ಒಂದು ಸುಳ್ಳನ್ನೂ ಆಡಲಾರೆ. 6ತಮ್ಮ ದಾಸಿಯ ಸಲಹೆಯನ್ನು ಪಾಲಿಸಿದರೆ ಸಾಕು. ದೇವರು ತಮ್ಮ ಕಾರ್ಯವನ್ನು

ಯಶಸ್ವಿಗೊಳಿಸುವರು. ನನ್ನ ಪ್ರಭು ಕೈಗೊಳ್ಳುವ ಯಾವ ಕಾರ್ಯವೂ ವಿಫಲವಾಗದು. 7ವಿಶ್ವದೊಡೆಯ ರಾಜಾಧಿರಾಜ ನೆಬೂಕದ್ನೆಚ್ಚರನು ಚಿರಾಯುವಾಗಲಿ! ಪ್ರತಿಯೊಂದು ಜೀವಾತ್ಮವನ್ನು ಸರಿಪಡಿಸಲು ಅವರು ನಿಮ್ಮನ್ನು ನೇಮಿಸಿದ್ದಾರೆ. ಅವರ ಆಳ್ವಿಕೆ ಮುಂದುವರೆಯಲಿ! ನಿಮ್ಮ ಮುಖಾಂತರ ಮಾನವರು ಮಾತ್ರವಲ್ಲ, ಕಾಡುಮೃಗಗಳು, ಸಾಕುಪ್ರಾಣಿಗಳು ಮೊದಲ್ಗೊಂಡು ಆಕಾಶದ ಪಕ್ಷಿಗಳು ಕೂಡ ನಿಮ್ಮ ಆಜ್ಞಾನುಸಾರ ನೆಬೂಕದ್ನೆಚ್ಚರನಿಗೂ ಅವನ ವಂಶಕ್ಕೂ ಸೇವೆ ಮಾಡುತ್ತವಲ್ಲವೆ?

8 "ನಿಮ್ಮ ಅಸಾಧಾರಣ ಪ್ರತಿಭೆ ಹಾಗೂ ಚಾಕಚಕ್ಯತೆಯನ್ನು ಕುರಿತು ನಾವು ಕೇಳಿದ್ದೇವೆ. ಈ ಚಕ್ರಾಧಿಪತ್ಯದಲ್ಲಿ ನಿಮ್ಮ ಸಾಮರ್ಥ್ಯಕ್ಕೆ ಎದುರಾಳಿ ಯಾರೂ ಇಲ್ಲ. ನಿಮ್ಮ ಅನುಭವದ ಸಂಪತ್ತಿಗೆ ಮಿತಿ ಇಲ್ಲ. ಯುದ್ಧ ನಿಪುಣತೆಯಲ್ಲಿ ನಿಮಗೆ ಯಾರೂ ಸಾಟಿ ಇಲ್ಲ; ಇದು ಇಡೀ ವಿಶ್ವಕ್ಕೆ ತಿಳಿದಿರುವಂಥ ವಿಷಯ. 9ನಿಮ್ಮ ಆಲೋಚನಾ ಸಭೆಯಲ್ಲಿ ಆಕಿಯೋರನು ಏನೇನು ಹೇಳಿರುವನೆಂದು ನಮಗೆ ತಿಳಿದಿದೆ. ಬೆಥೂಲಿಯದ ಜನರು ಅವನ ಜೀವವನ್ನು ಉಳಿಸಿದ್ದರಿಂದ, ಅವನು ನಿಮಗೆ ಹೇಳಿದ್ದೆಲ್ಲವನ್ನೂ ಅವರಿಗೆ ತಿಳಿಸಿದ್ದಾನೆ. 10ಒಡೆಯಾ, ದೊರೆಯೆ, ಅವನು ಹೇಳಿದ ಸಮಾಚಾರವನ್ನು ಕಡೆಗಣಿಸಬೇಡಿ. ಅವನ ಮಾತು ನಿಜವಾದುದರಿಂದ ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡರೆ ಒಳಿತು. ನಮ್ಮ ರಾಷ್ಟ್ರವನ್ನು ಯಾರೂ ದಂಡಿಸುವಂತಿಲ್ಲ. ಅವರು ದೇವದ್ರೋಹ ಕಟ್ಟಿಕೊಳ್ಳದಿದ್ದರೆ, ಯಾವ ಕತ್ತಿಗೂ ಅವರ ಮೇಲೆ ಶಕ್ತಿ ಇರದು. 11ಆದರೆ ವಾಸ್ತವವಾಗಿ ಒಡೆಯರಾದ ನೀವು ಸೋತು ಹಿಮ್ಮೆಟ್ಟಬೇಕಾಗಿಲ್ಲ. ಪದೇ ಪದೇ ಅವರು ಕಟ್ಟಿಕೊಳ್ಳುವ ಪಾಪವು ದೇವರನ್ನು ಉದ್ರೇಕಿಸುತ್ತದೆ. ಮರಣವು ಅವರ ಮೇಲೆ ಎರಗಲಿದೆ. 12ಆಹಾರ ಪದಾರ್ಥಗಳು ಕಡಿಮೆಯಾಗುತ್ತಿವೆ. ನೀರು ಸಹ ಸಾಲದಾಗಿದೆ. ಶಾಸ್ತ್ರಾನುಸಾರ ತಿನ್ನಬಾರದೆಂದು ದೇವರು ಆಜ್ಞಾಪಿಸಿದ ಮಾಂಸಕ್ಕಾಗಿ ಪಶುಪ್ರಾಣಿಗಳನ್ನು ವಧಿಸಲಿದ್ದಾರೆ. 13ದವಸ ಧಾನ್ಯಗಳ ಪ್ರಥಮ ಫಲವನ್ನು ದೇವರಿಗೆ ಸಮರ್ಪಿಸುತ್ತಾರೆ. ದೇವರ ಸಮ್ಮುಖದಲ್ಲಿ ಸೇವೆ ಮಾಡುವ ಯಾಜಕರಿಗೆ ಮಾತ್ರ ಅದು ಮೀಸಲಾಗಿರುತ್ತದೆ. ಅವುಗಳನ್ನು ಜನರು ಮುಟ್ಟುವಂತಿಲ್ಲ. 14ಹೀಗಿರುವಲ್ಲಿ, ನಮ್ಮ ಜನರು ಅಂಥದ್ದನ್ನು ತಿನ್ನಲು, ದ್ರಾಕ್ಷಾರಸದ ಹಾಗು ಎಣ್ಣೆಯ ದಶಮಾಂಶವನ್ನು ಬಳಸಿಕೊಳ್ಳಲು ತೀರ್ಮಾನ ಕೈಗೊಂಡು, ಹಿರಿಯರ ಆಲೋಚನಾಸಭೆಯ ಅನುಮತಿಯನ್ನು ಪಡೆಯಲು ಜೆರುಸಲೇಮಿಗೆ ಜನರನ್ನು ಕಳುಹಿಸಿದ್ದಾರೆ. ಅಲ್ಲಿನ ಹಿರಿಯರು ಸಹ ಅಂಥದ್ದನ್ನೇ ಮಾಡುತ್ತಿದ್ದಾರೆ. 15ಅದರ ಪರಿಣಾಮ ಇಷ್ಟೆ: ಅನುಮತಿ ದೊರಕಿ, ಮೀಸಲಾದವುಗಳಿಗೆ ಅವರು ಕೈ ಹಾಕಿದ ದಿನವೇ, ನಿಮ್ಮ ಕೈವಶವಾಗಿ ನಾಶವಾಗುತ್ತಾರೆ.

16 "ದಾಸಿಯಾದ ನಾನು ಇದನ್ನು ಕೇಳಿದಾಕ್ಷಣ ಅವರಿಂದ ತಪ್ಪಿಸಿಕೊಂಡು ಇಲ್ಲಿಗೆ ಬಂದೆ. ನಾನು ನಿಮ್ಮೊಂದಿಗೆ ಎಂಥ ಕಾರ್ಯವನ್ನು ಸಾಧಿಸಲು ದೇವರು ನನ್ನನ್ನು ಕಳುಹಿಸಿದ್ದಾರೆಂದರೆ – ಇಡೀ ವಿಶ್ವವೇ ಅದನ್ನು ಕೇಳಿ ಬೆರಗಾಗಬೇಕು. 17ನಿಮ್ಮ ದಾಸಿಯಾದ ನಾನು ಭಯಭಕ್ತಿಯುಳ್ಳ ಮಹಿಳೆ. ಹಗಲುರಾತ್ರಿ, ಪರಲೋಕದ ದೇವರನ್ನು ಆರಾಧಿಸಿ ಗೌರವಿಸುವಂಥ ಮಹಿಳೆ. ಆದುದರಿಂದ, ನಿಮಗೆ ನನ್ನ ಸಲಹೆ ಏನೆಂದರೆ ನಾನು ನಿಮ್ಮೊಂದಿಗೆ ಇರುತ್ತೇನೆ. ದಾಸಿಯಾದ ನಾನು ಪ್ರತಿದಿನ ಆ ಕಣಿವೆಗೆ ಹೋಗಿ ದೇವರನ್ನು ಪ್ರಾರ್ಥಿಸಿ ಆ ಜನರು ಯಾವಾಗ ಪಾಪವನ್ನು ಕಟ್ಟಿಕೊಳ್ಳುತ್ತಾರೆಂದು ನನಗೆ ತಿಳಿಸಲು ಅವರಲ್ಲಿ ಯಾಚಿಸುತ್ತೇನೆ. 18ಆಗ ನಾನು ಬಂದು ನಿಮಗೆ ತಿಳಿಸಿದರೆ, ನೀವು ಇಡೀ ಸೈನ್ಯವನ್ನು ಅವರ ಕಡೆಗೆ ಕರೆದುಕೊಂಡು ಹೋಗಬಹುದು. ಅವರಾರೂ ನಿಮ್ಮನ್ನು ಎದುರಿಸಲಾರರು. 19ಜುದೇಯವನ್ನು ದಾಟಿ, ಜೆರುಸಲೇಮನ್ನು ತಲುಪುವವರೆಗೆ ನಾನು ನಿಮಗೆ ದಾರಿತೋರಿಸುತ್ತೇನೆ. ಜೆರುಸಲೇಮ್ ನಗರದ ಮಧ್ಯೆ ನಿಮ್ಮನ್ನು ಸಿಂಹಾಸನದಲ್ಲಿ ಕುಳ್ಳಿರಿಸುತ್ತೇನೆ. ಆಗ ನೀವು ಕುರುಬನಿಲ್ಲದ ಕುರಿಗಳಂತಿರುವ ಅವರನ್ನು ಸುತ್ತುಗಟ್ಟಬಹುದು. ಒಂದೇ ಒಂದು ನಾಯಿ ಕೂಡ ನಿಮಗೆ ತಡೆಯಾಗಿ ಬೊಗಳಲಾರದು. ಭವಿಷ್ಯಜ್ಞಾನದಿಂದ ನನಗಿದು ತಿಳಿದು ಬಂದಿದೆ. ಈ ಸಂಗತಿಯನ್ನು ನನಗೆ ಮುನ್ ತಿಳಿಸಲಾಗಿರುವುದರಿಂದ ನಾನು ನಿಮಗೆ ಅದನ್ನು ಬಯಲುಮಾಡಲು ಬಂದಿದ್ದೇನೆ," ಎಂದಳು.

20 ಹೊಲೊಫರ್ನೆಸನಿಗೂ ಅವನ ಸಹಾಯಕರಿಗೂ ಅವಳ ಮಾತು ಹಿಡಿಸಿತು. ಆಕೆಯ ಬುದ್ಧಿವಂತಿಕೆಯನ್ನು ಮೆಚ್ಚಿ ಚಕಿತರಾಗಿ, "ಭೂಮಿಯ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ಈಕೆಗೆ ಯಾವ ಸ್ತ್ರೀಯೂ ಸಾಟಿಯಿಲ್ಲ. ಈಕೆಯ ರೂಪು ಎಷ್ಟು ಚೆನ್ನ! ಆಕೆಯ ನುಡಿ ಎಷ್ಟು ವಿವೇಕಪೂರ್ಣ!" ಎಂದರು. ಪುನಃ ಹೊಲೊಫರ್ನೆಸ್, "ಇತರರಿಗಿಂತ ಮುಂಚಿತವಾಗಿ ನಿನ್ನನ್ನು ದೇವರು ಇಲ್ಲಿಗೆ ಕಳುಹಿಸಿದ್ದು

ಒಳ್ಳೆಯದಾಯಿತು. ಜಯ ಲಭಿಸುವುದು ನಮಗೆ; ವಿನಾಶ ನನ್ನ ಒಡೆಯನನ್ನು ಅವಮಾನಪಡಿಸಿದ ಅವರಿಗೆ. ನಿನಗಾದರೋ, ಬುದ್ಧಿಯಿದ್ದಷ್ಟು ಬೆಡಗೂ ಇದೆ; ನೀನು ನುಡಿದ ಪ್ರಕಾರ ಮಾಡಿದರೆ ನಿನ್ನ ದೇವರು ನನ್ನ ದೇವರಾಗುವರು; ಅರಸ ನೆಬೂಕದ್ನೆಚ್ಚರನ ಅರಮನೆ ನಿನ್ನ ನಿವಾಸವಾಗುವುದು. ವಿಶ್ವದಲ್ಲೆಲ್ಲಾ ನೀನು ಪ್ರಖ್ಯಾತಿ ಹೊಂದುವೆ," ಎಂದನು.

### ಜೂಡಿತಳ ಧರ್ಮನಿಷ್ಠೆ

**12** ಅಷ್ಟನ್ನು ಹೇಳಿದ್ದೇ, ಹೊಲೊಫರ್ನೆಸ್ ಅವಳನ್ನು ಊಟದ ಕೋಣೆಗೆ ಕರೆದುತಂದನು. ಅಲ್ಲಿ ಬೆಳ್ಳಿಯ ಪಾತ್ರೆಗಳಲ್ಲಿ ಊಟ ಸಿದ್ಧವಾಗಿ ಇಡಲಾಗಿತ್ತು. ತಾನು ತಿನ್ನುವ ಊಟವನ್ನೇ ಅವಳಿಗೂ ಬಡಿಸಿ, ತಾನು ಕುಡಿಯುವ ದ್ರಾಕ್ಷಾರಸವನ್ನೇ ಅವಳಿಗೂ ಕುಡಿಯಲು ಕೊಟ್ಟನು. 2ಅದಕ್ಕೆ ಜೂಡಿತಳು, "ನಾನಿದನ್ನು ತಿನ್ನಲಾರೆ; ತಿಂದರೆ ತಪ್ಪಾದೀತು. 3ನಾನು ತಂದಿರುವುದೇ ನನಗೆ ಸಾಕು. ಅದಲ್ಲದೆ ನಿಮಗೂ ಆಹಾರಪದಾರ್ಥಗಳು ಕೊರತೆ ಆಗಬಾರದು," ಎಂದಳು. ಅದಕ್ಕೆ ಹೊಲೊಫರ್ನೆಸ್, "ನೀನು ಹೆಚ್ಚಿನ ಆಹಾರವನ್ನು ತರುವುದೆಂತು? ನಿನ್ನ ಕುಲದವರು ಇಲ್ಲಿ ಯಾರೂ ಇಲ್ಲವಲ್ಲಾ" ಎಂದನು. 4ಅದಕ್ಕೆ ಅವಳು, "ನನ್ನೊಡೆಯಾ, ನೀವು ಚಿರಾಯುವಾಗಿರಿ! ನಿಮ್ಮ ದಾಸಿ ಈ ಆಹಾರವನ್ನು ಮುಗಿಸುವ ಮುನ್ನವೇ ಸರ್ವೇಶ್ವರ ತಮ್ಮ ಸಂಕಲ್ಪವನ್ನು ನನ್ನ ಮುಖಾಂತರ ಈಡೇರಿಸುವರು," ಎಂದಳು. 5ಹೊಲೊಫರ್ನೆಸನ ಸೇವಕರು ಅವಳನ್ನು ಕರೆದುಕೊಂಡು ಹೋಗಿ ಪ್ರತ್ಯೇಕವಾದ ಒಂದು ಗುಡಾರದಲ್ಲಿ ಇರಿಸಿದರು. ಅಲ್ಲಿ ಜೂಡಿತ್ ನಡುರಾತ್ರಿಯನ್ನು ಕಳೆದಳು. 6ಮುಂಜಾನೆ ಹಾಸಿಗೆಯಿಂದ ಎದ್ದು ಹೊಲೊಫರ್ನೆಸನಿಗೆ, "ದಾಸಿಯಾದ ನನಗೆ ಪ್ರಾರ್ಥನೆ ಮಾಡುವುದಕ್ಕಾಗಿ ಹೊರಕ್ಕೆ ಹೋಗಿಬರಲು ಅಪ್ಪಣೆಯಾಗಬೇಕು," ಎಂದು ಈಗಾಗಲೇ ಬಿನ್ನವಿಸಿದ್ದಳು. 7ಅವಳನ್ನು ತಡೆಯಬಾರದೆಂದು ಹೊಲೊಫರ್ನೆಸ್ ಕಾವಲಾಳುಗಳಿಗೆ ಆಜ್ಞೆ ಇತ್ತಿದ್ದನು. ಗುಡಾರದಲ್ಲಿ ಜೂಡಿತ್ ಮೂರು ದಿನ ಇದ್ದುಕೊಂಡು, ಪ್ರತೀರಾತ್ರಿ ಬೆಥೂಲಿಯದ ಬಾವಿಯ ಕೆಳಗೆ ಹೋಗಿ ಬರುತ್ತಿದ್ದಳು. ಅಲ್ಲಿ ಗಡಿಕಾವಲು ದಳವಿತ್ತು. 8ಬುಗ್ಗೆಯಬಳಿ ಸ್ನಾನ ಮಾಡಿಕೊಂಡು ತನ್ನ ಜನಾಂಗದ ಬಿಡುಗಡೆಗಾಗಿ ಇಸ್ರಯೇಲಿನ ದೇವರಾದ ಸರ್ವೇಶ್ವರನಿಗೆ ಪ್ರಾರ್ಥನೆ ಮಾಡುತ್ತಿದ್ದಳು. 9ಮಡಿಮಾಡಿಕೊಂಡು ತನ್ನ ಗುಡಾರಕ್ಕೆ ಹೋಗಿ ಸಾಯಂಕಾಲ ಊಟ ಬರುವವರೆಗೂ ಅಲ್ಲಿಯೇ ಇರುತ್ತಿದ್ದಳು.

### ಹೊಲೊಫರ್ನೆಸನ ಭೋಜನಾಕೂಟದಲ್ಲಿ

10 ನಾಲ್ಕನೇ ದಿನ ಹೊಲೊಫರ್ನೆಸನು ಬೇರೆಯವರನ್ನು ಬಿಟ್ಟು ತನ್ನ ಜೊತೆಯಲ್ಲಿದ್ದ ಅಧಿಕಾರಿಗಳನ್ನು ಮಾತ್ರ ಆಹ್ವಾನಿಸಿ ಔತಣವನ್ನು ಏರ್ಪಡಿಸಿದನು. 11"ತನ್ನ ಆಪ್ತ ಕಾರ್ಯದರ್ಶಿಯಾದ ಕಂಚುಕಿ ಬಗೋವನಿಗೆ, "ನೀನು ನೋಡಿಕೊಳ್ಳುತ್ತಿರುವ ಆ ಹಿಬ್ರು ಮಹಿಳೆಯನ್ನು ಬರಹೇಳು; ಅವಳು ನಮ್ಮೊಂದಿಗೆ ಔತಣದಲ್ಲಿ ಭಾಗವಹಿಸಿ ಅನ್ನಪಾನಗಳನ್ನು ಸ್ವೀಕರಿಸುವಂತೆ ಹೇಳು. 12ಇಂಥಾ ಮಹಿಳೆಯನ್ನು ಮೋಹಿಸದೆ ಬಿಟ್ಟುಬಿಟ್ಟರೆ ನಮಗೇ ಅವಮಾನ; ಎಲ್ಲರು ನಮ್ಮನ್ನು ನೋಡಿ ಪರಿಹಾಸ್ಯ ಮಾಡುವರು" ಎಂದನು. 13ಆಗ ಬಗೋವನು ಹೊಲೊಫರ್ನೆಸನ ಕಡೆಯಿಂದ ಜೂಡಿತಳು ಇದ್ದೆಡೆಗೆ ಹೋದನು. "ಚೆಲುವಾದ ಯುವತಿಯೇ, ನನ್ನ ಒಡೆಯನ ಬಳಿಗೆ ಚಿತ್ತೈಸುವೆಯಾ? ನೀನು ಅವನ ಎದುರಿಗೆ ಗೌರವ ಸ್ಥಾನದಲ್ಲಿ ಕುಳಿತು ಸಂತೋಷದಿಂದ ದ್ರಾಕ್ಷಾರಸ ಕುಡಿಯುವೆ. ಅರಸ ನೆಬೂಕದ್ನೆಚ್ಚರನ ಅರಮನೆಯಲ್ಲಿನ ಅಸ್ಸೀರಿಯದ ಕುಲೀನ ಸ್ತ್ರೀಯರಂತೆ ನೀನೂ ಈ ದಿನ ಪರಿಗಣಿತಳಾಗುವೆ," ಎಂದನು. 14ಅದಕ್ಕೆ ಜೂಡಿತಳು, "ನನ್ನ ಒಡೆಯನ ವಿರುದ್ಧ ಪ್ರತಿಭಟಿಸಲು ನಾನು ಎಷ್ಟರವಳು? ಅವರು ಬಯಸಿದ್ದೆಲ್ಲವನ್ನೂ ಮಾಡಲು ನಾನು ಹಿಂಜರಿಯುವುದಿಲ್ಲ. ನಾನು ಸಾಯುವವರೆಗೂ ಇಂಥ ಸಂತಸದ ಘಟನೆಯನ್ನು ಮರೆಯಲಾರೆ!" ಎಂದಳು.

15 ಹೀಗೆಂದು ಜೂಡಿತಳು ಎದ್ದು, ಬಟ್ಟೆಗಳನ್ನು ಧರಿಸಿ, ತನ್ನ ಎಲ್ಲ ಆಭರಣಗಳನ್ನು ತೊಟ್ಟು ಹೊರಟಳು. ಸೇವಕಿಯು ಅವಳ ಮುಂದೆ ಹೋದಳು. ಬಗೋವನು ಜೂಡಿತಳಿಗೆ ಕೂರಲು ಕೊಟ್ಟಿದ್ದ

ಕಂಬಳಿಯನ್ನು ಹೊಲೊಫರ್ನೆಸನ ಎದುರಿನಲ್ಲೇ ಹಾಸಿದನು. ಅದರ ಮೇಲೆ ಕುಳಿತುಕೊಂಡು ಊಟಮಾಡಲೆಂದು ಏರ್ಪಡಿಸಿದ್ದನು. 16ಜೂಡಿತ್ ಬಂದು ಆ ತನ್ನ ಸ್ಥಳದಲ್ಲಿ ಕುಳಿತಳು. ಅವಳನ್ನು ಕಂಡದ್ದೇ, ಹೊಲೊಫರ್ನೆಸನು ಪರವಶನಾಗಿ ತಳಮಳಗೊಂಡನು. ಅವಳೊಂದಿಗೆ ಮಲಗಬೇಕೆಂಬ ಹಂಬಲ ಅಧಿಕವಾಯಿತು. ಅವಳನ್ನು ಕಂಡ ದಿನದಿಂದಲೇ ಅವಳನ್ನು ಮೋಹಿಸಬೇಕೆಂದು ಆಶೆಯಿಂದ ಸಂದರ್ಭ ಕಾಯುತ್ತಿದ್ದನು. 17ಎಂತಲೇ ಹೊಲೊಫರ್ನೆಸನು, "ಕುಡಿ, ಸಂತೋಷಿಸೋಣ," ಎಂದು ಉಸುರಿದ. 18ಅದಕ್ಕೆ ಜೂಡಿತಳು, "ಬಹಳ ಸಂತೋಷ, ಒಡೆಯಾ, ನನ್ನ ಜೀವನದಲ್ಲೇ ಇಂದು ಅತಿ ಶುಭಕರವಾದ ದಿನ," ಎಂದು ಹೇಳಿ, 19ತನ್ನ ದಾಸಿ ಅಡಿಗೆ ಮಾಡಿದ್ದನ್ನು ತಿಂದು ದ್ರಾಕ್ಷಾರಸವನ್ನು ಕುಡಿದಳು. 20ಹೊಲೊಫರ್ನೆಸನು ಅವಳಿಂದ ಎಷ್ಟು ಪುಳಕಿತನಾದನೆಂದರೆ, ಧಾರಾಳವಾಗಿ ದ್ರಾಕ್ಷಾರಸವನ್ನು ಬಟ್ಟಲಿನಲ್ಲಿ ಸುರಿದು ಕುಡಿದನು. ತನ್ನ ಜೀವಮಾನದಲ್ಲೇ ಅಷ್ಟೊಂದು ಅವನು ಕುಡಿದಿರಲಿಲ್ಲ.

**13** ರಾತ್ರಿ ಬಹಳ ಸಮಯವಾಯಿತು. ಅಧಿಕಾರಿಗಳು ದಡಬಡನೆ ತಮ್ಮ ತಮ್ಮ ಗುಡಾರಗಳಿಗೆ ತೆರಳಿದರು.
ಯಜಮಾನನ ಸೇವಕರು ಒಳಗೆ ಬರದಂತೆ ಬಗೋವನು, ಹೊರಗಿನ ಬಾಗಿಲನ್ನು ಮುಚ್ಚಿದನು. 2ಕುಡಿದು
ಅಮಲೇರಿದ್ದರಿಂದ ಎಲ್ಲರೂ ಹಾಸಿಗೆಯಲ್ಲಿ ಮುದುರಿಕೊಂಡರು. ಅಂತೆಯೇ ಹೊಲೊಫರ್ನೆಸನು ಸಹ
ಮತ್ತನಾಗಿ ಸುಪ್ಪತ್ತಿಗೆಯ ಮೇಲೆ ಬಿದ್ದುಬಿಟ್ಟಿದ್ದನು. ಜೂಡಿತ್ ಮಾತ್ರ ತನ್ನ ದಾಸಿಯೊಡನೆ ಎಚ್ಚರವಾಗಿದ್ದಳು.
3ಮಲಗುವ ಕೋಣೆಯ ಆಚೆ, ಬಾಗಿಲ ಬಳಿ, ತನ್ನ ದಾಸಿಯನ್ನು ನಿಲ್ಲಿಸಿ ತಾನು ಹೊರಕ್ಕೆ ಬರುವವರೆಗೂ
ಅಲ್ಲಿಯೇ ಕಾದುಕೊಂಡಿರಬೇಕೆಂದು ಅವಳಿಗೆ ತಿಳಿಸಿದಳು. ಪ್ರತಿದಿನವೂ ಹಾಗೆಯೇ ಮಾಡುತ್ತಿದ್ದಳು.
ಅಂತೆಯೇ ತಾನು ಪ್ರಾರ್ಥನೆ ಮಾಡಲು ಹೊರಕ್ಕೆ ಹೋಗಬೇಕಾಗಿದೆ ಎಂದು ಬಗೋವನಿಗೂ ಈಗಾಗಲೇ
ತಿಳಿಸಿದ್ದಳು.

4 ಹೀಗೆ ಒಳಗೆ ಮುಖ್ಯಸ್ಥರೇ ಆಗಲಿ, ಸಾಮಾನ್ಯರೇ ಆಗಲಿ, ಯಾರೂ ಹೊಲೊಫರ್ನೆಸನು
ಮಲಗಿದ್ದ ಕೋಣೆಯಲ್ಲಿರಲಿಲ್ಲ. ಜೂಡಿತ್ ಹೊಲೊಫರ್ನೆಸನ ಮಂಚದ ಬಳಿ ನಿಂತುಕೊಂಡು, ತನ್ನಲ್ಲಿಯೇ
ಇಂತೆಂದು ಪ್ರಾರ್ಥನೆ ಮಾಡಿದಳು:

5 "ಸರ್ವಶಕ್ತಿ ಸಾಮರ್ಥ್ಯವು ನಿನ್ನದೇ ಹೇ
ಸರ್ವೇಶ್ವರಾ,
ಯಶಸ್ವಿಗೊಳಿಸು ನನ್ನ ಕೈಸಾಧಿಸಲಿರುವ
ಕಾರ್ಯವ.
ಇದರಿಂದಾಗಿ ಬೆಳಗಲಿ ಜೆರುಸಲೇಮಿನ
ಮಹಿಮೆ
ದೊರಕಲಿ ನಿನ್ನ ಸ್ವಾಸ್ತ್ಯವಾದ ಇಸ್ರಯೇಲರಿಗೆ
ಬಿಡುಗಡೆ.
ನನ್ನ ಯೋಜನೆಯನು ಕೈಗೂಡಿಸಲು
ನಮ್ಮೆದುರಿನ ಶತ್ರುಗಳನು ಕೊಂದುಹಾಕಲು
ಸಮಯವಿದೋ ಬಂದೊದಗಿರುವುದು."

6 ಅನಂತರ ಜೂಡಿತಳು ಮಂಚದ ಕಂಬದ ಬಳಿ, ಹೊಲೊಫರ್ನೆಸನ ತಲೆಯ ಮೇಲ್ಭಾಗದಲ್ಲಿ,
ತೂಗಾಡುತ್ತಿದ್ದ ಕಠಾರಿಯನ್ನು ತೆಗೆದುಕೊಂಡಳು. 7ಹಾಸಿಗೆಯ ಹತ್ತಿರ ಬಂದು ಅವನ ತಲೆಗೂದಲನ್ನು
ಹಿಡಿದುಕೊಂಡಳು, "ಇಸ್ರಯೇಲಿನ ದೇವರಾದ ಸರ್ವೇಶ್ವರಾ, ಇಂದು ನನಗೆ ಶಕ್ತಿಯನ್ನು
ದಯಪಾಲಿಸಯ್ಯಾ," ಎಂದು ಪ್ರಾರ್ಥಿಸಿದಳು. 8ಅನಂತರ ತನ್ನ ಶಕ್ತಿಯನ್ನೆಲ್ಲ ಬಳಸಿ ಆ ಕಠಾರಿಯಿಂದ
ಕುತ್ತಿಗೆಗೆ ಎರಡು ಏಟುಗಳನ್ನು ಹಾಕಿ ಅವನ ತಲೆಯನ್ನು ಕಡಿದುಬಿಟ್ಟಳು. 9ಅವನ ದೇಹವನ್ನು
ಹಾಸಿಗೆಯಿಂದ ಕೆಳಕ್ಕೆ ಉರುಳಿಸಿ, ಮೇಲ್ಚಪ್ಪರವನ್ನು ಕೆಡವಿಹಾಕಿದಳು. ಹೊಲೊಫರ್ನೆಸನ ತಲೆಯನ್ನು
ತೆಗೆದುಕೊಂಡು ಹೋಗಿ ದಾಸಿಯ ಕೈಗೆ ಕೊಡಲು, ಅವಳು ಅದನ್ನು ತನ್ನ ಚೀಲದಲ್ಲಿ ಹಾಕಿದಳು.

10ಇಬ್ಬರೂ ಪಾಳೆಯವನ್ನು ಬಿಟ್ಟು, ಯಥಾಪ್ರಕಾರ ಪ್ರಾರ್ಥನೆ ಮಾಡಲು ಹೋದಂತೆ ನಡೆದರು. ಪಾಳೆಯದ ಆಚೆಹೋಗಿ ಕಮರಿಯನ್ನು ದಾಟಿದರು. ಬೆಟ್ಟವನ್ನು ಹತ್ತಿ ಬೆಥೂಲಿಯದ ಊರಬಾಗಿಲತ್ತ ಧಾವಿಸಿದರು.

**ಹೊಲೊಫರ್ನೆಸನ ತಲೆ ಬೆಥೂಲಿಯದಲ್ಲಿ**

11 ದೂರದಿಂದಲೇ ಜೂಡಿತಳು ಊರ ಬಾಗಿಲ ಬಳಿ ಕಾವಲಿದ್ದವರನ್ನು ಕೂಗಿ ಕರೆದಳು: "ಬಾಗಿಲು
ತೆರೆಯಿರಿ, ಬಾಗಿಲು ತೆರೆಯಿರಿ," ಎಂದು ಬೊಬ್ಬೆ ಹಾಕಿದಳು. "ಇನ್ನೂ ನಮ್ಮೊಂದಿಗೆ ಇದ್ದಾರೆ ನಮ್ಮ
ದೇವರಾದ ಸರ್ವೇಶ್ವರ. ಇಂದು ಅವರು ನಮ್ಮ ಶತ್ರುಗಳ ವಿರುದ್ಧ ಬಲಪ್ರಯೋಗ ಮಾಡಿದ್ದಾರೆ.
ಇಸ್ರಯೇಲಿನ ಮಧ್ಯೆ ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದಾರೆ," ಎಂದು ಹೇಳಿದಳು. 12ಆಕೆಯ ಧ್ವನಿಯನ್ನು
ಕೇಳುತ್ತಲೇ ಊರ ಜನರು ಬಾಗಿಲ ಬಳಿಗೆ ಧಾವಿಸಿ ಬಂದರು. ಹಿರಿಯರನ್ನು ಕರೆಸಿದರು. 13ದೊಡ್ಡವರು,
ಚಿಕ್ಕವರು ಎನ್ನದೆ ಎಲ್ಲರೂ ಅಲ್ಲಿಗೆ ಓಡಿಬಂದರು. ಜೂಡಿತಳ ಆಗಮನ ಅವರಿಗೆ ಅನಿರೀಕ್ಷಿತವಾಗಿತ್ತು. ಅವರು ಬಾಗಿಲನ್ನು ತಕ್ಷಣವೇ ತೆಗೆದು ಆಕೆಯನ್ನು ಸ್ವಾಗತಿಸಿದರು. ದೀವಟಿಗೆಗಳನ್ನು ಹೊತ್ತಿಸಿ ಎಲ್ಲರೂ ಆಕೆಯನ್ನು ಸುತ್ತುವರೆದರು.

14 ಜೂಡಿತಳು ಗಟ್ಟಿಯಾಗಿ:

"ದೇವರನ್ನು ಸ್ತುತಿಸಿರಿ; ಅವರನ್ನು
ಕೊಂಡಾಡಿರಿ;
ತಮ್ಮ ಕರುಣೆಯನ್ನು ಇಸ್ರಯೇಲ್
ಮನೆತನದಿಂದ
ಹಿಂತೆಗೆದುಕೊಳ್ಳದ ಆ ದೇವರನ್ನು
ಸ್ತುತಿಸಿರಿ !
ಈ ರಾತ್ರಿ ನನ್ನ ಕೈಯಿಂದ ಶತ್ರುವನ್ನು
ಸದೆಬಡಿದಂಥ
ಆ ದೇವರನ್ನು ಸ್ತುತಿಸಿರಿ," ಎಂದಳು.

15 ಅನಂತರ ಚೀಲದಿಂದ ಅಸ್ಸೀರಿಯದ ಸೇನಾಧಿಪತಿ ಹೊಲೊಫರ್ನೆಸನ ತಲೆಯನ್ನು ತೆಗೆದು
ಅವರಿಗೆ ತೋರಿಸಿದಳು. "ಅಸ್ಸೀರಿಯದ ಸೇನಾಧಿಪತಿ ಹೊಲೊಫರ್ನೆಸನ ತಲೆಯಿದು. ಇಗೋ ಚಪ್ಪರದ ಮೇಲ್ಹೊದಿಕೆ! ಇದರ ಕೆಳಗೇ ಅವನು ಕುಡಿದು ಮತ್ತನಾಗಿ ಬಿದ್ದಿದ್ದ; ಸರ್ವೇಶ್ವರ ಒಬ್ಬ ಹೆಂಗಸಿನ ಕೈಯಿಂದ
ಅವನ ತಲೆಯನ್ನು ಕಡಿದಿದ್ದಾರೆ. 16ನನ್ನ ಕಾರ್ಯ ಕೈಗೂಡುವಂತೆ ಮಾಡಿದ ಆ ಸರ್ವೇಶ್ವರನಿಗೆ ಸ್ತೋತ್ರ!
ನನ್ನ ಸೌಂದರ್ಯದಿಂದ ಹುಚ್ಚುಹಿಡಿದಂತಾದ ಅವನು ತನ್ನ ಗುಳಿಯಲ್ಲೇ ಬಿದ್ದನು. ಆದರೆ ಅವನು ನನ್ನನ್ನು ಮುಟ್ಟಲಿಲ್ಲ, ಕೆಡಿಸಿ ಅವಮಾನಗೊಳಿಸಲಿಲ್ಲ," ಎಂದಳು.

"ಭೂಲೋಕದ ಎಲ್ಲಾ ನಾರೀಮಣಿ
ಗಳಿಗಿಂತ ಮಿಗಿಲಾಗಿ, ಮಗಳೇ,
ಆಶೀರ್ವದಿಸಲಿ ದೇವನು ನಿನ್ನನ್ನು
ಉನ್ನತದಿಂದಲೇ.
ಸ್ತುತಿಸಲ್ಲಲಿ ಭೂಪರಗಳ ಸೃಷ್ಟಿಕರ್ತ
ಸರ್ವೇಶ್ವರನಿಗೆ
ಶತ್ರುಗಳ ಮುಂದಾಳಿನ ಶಿರಚ್ಛೇದನ ಮಾಡಲು
ದಾರಿತೋರಿದಾತನಿಗೆ !

19 ಸದಾ ಸ್ಮರಿಸಿಕೊಳ್ಳುವರು ಜನರು ದೇವರ
ಶಕ್ತಿ ಸಾಮರ್ಥ್ಯವನು
ಮರೆಯವು ಮಾನವ ಹೃನ್ಮನಗಳು
ನೀ ತೋರಿದ ಶ್ರದ್ಧೆಯನು.

ಲಭಿಸಲಿ ನಿನಗೆ ಕೃಪಾವರಗಳು,
ಸಲ್ಲಲಿ ಘನತೆಗೌರವಗಳು
ಇದನು ದಯಪಾಲಿಸಲಿ ಆ ದೇವನು.
ನನ್ನ ನಾಡು ಶತ್ರುವಿಗೆ ಶರಣಾಗಲಿದ್ದ
ಕಾಲಕ್ಕೆ
ಲೆಕ್ಕಿಸಲಿಲ್ಲ ನೀನು ನಿನ್ನ ಪ್ರಾಣ ರಕ್ಷಣೆಯನೇ!
ವಿನಾಶದಿಂದ ನಮ್ಮನು ಕಾಪಾಡಿದೆ
ದೇವನ ಮುಂದೆ ಸನ್ಮಾರ್ಗದಲೆ ನಡೆದೆ."
ಆಗ ಜನರು 'ಆಮೆನ್', 'ಆಮೆನ್' ಎಂದರು.

### ಅಸ್ಸೀರಿಯರ ಮೇಲೆ ಧಾಳಿ

**14** ಆಗ ಜೂಡಿತಳು, "ಸಹೋದರರೇ, ಕೇಳಿ: ಈ ತಲೆಯನ್ನು ತೆಗೆದುಕೊಂಡು ಕೋಟೆಯ ಗೋಡೆಗಳ ಮೇಲೆ ತೂಗುಹಾಕಿರಿ. 2ಬೆಳಗ್ಗೆ ಸೂರ್ಯೋದಯವಾದಾಗ ಪ್ರತಿ ಒಬ್ಬನೂ ತನ್ನ ಆಯುಧಗಳನ್ನು ತೆಗೆದುಕೊಳ್ಳಲಿ. ಪ್ರತಿಯೊಬ್ಬ ದೃಢಕಾಯವ್ಯಕ್ತಿ ಪಟ್ಟಣವನ್ನು ಬಿಟ್ಟು ಹೊರಡಲಿ. ಒಬ್ಬ ನಾಯಕನನ್ನು ಆರಿಸಿಕೊಳ್ಳಿ. ಅವನ ಹಿಂದೆ ಅಸ್ಸೀರಿಯದವರ ಪಾಳೆಯದ ಗಡಿದಳಕ್ಕೆ ಇದಿರಾಗಿ ಹೋಗುವವರಂತೆ ನಟಿಸಿರಿ, ಆದರೆ ಹೋಗಬೇಡಿ. 3ಆಗ ಅಸ್ಸೀರಿಯದವರು ತಮ್ಮ ಆಯುಧಗಳನ್ನು ತೆಗೆದುಕೊಂಡು, ಪಾಳೆಯಕ್ಕೆ ಓಡಿಹೋಗಿ, ದಳಾಧಿಕಾರಿಗಳನ್ನು ಎಬ್ಬಿಸುವರು. ದಳಾಧಿಕಾರಿಗಳು ಹೊಲೊಫರ್ನೆಸನ ಡೇರೆಗೆ ಧಾವಿಸುವರು. ಆತನನ್ನು ಕಾಣಲಾರದೆ ಹೋದಾಗ ಕಂಗೆಟ್ಟು ನಿಮ್ಮ ಸೈನಿಕರನ್ನು ಎದುರಿಸಲಾರದೆ ಪಲಾಯನಗೈಯುವರು. 4ಆಗ ನೀವು ಮತ್ತು ಇಸ್ರಯೇಲಿನ ನಿವಾಸಿಗಳೆಲ್ಲರು ಮಾಡಬೇಕಾದುದು ಏನೆಂದರೆ: ಅವರು ಓಡಿ ಹೋಗುತ್ತಿರುವಾಗ ಅವರನ್ನು ಬೆನ್ನಟ್ಟಿ ಹೋಗಿ ಸದೆ ಬಡಿಯಬೇಕು.

### ಆಕಿಯೋರನ ಮತಾಂತರ

5 "ಇದನ್ನು ಮಾಡುವುದಕ್ಕೆ ಮುಂಚೆ ಅಮ್ಮೋನ್ಯನಾದ ಆಕಿಯೋರನನ್ನು ನನ್ನ ಬಳಿಗೆ ಕರೆಯಿರಿ. ಆತನೇ ಬಂದು, ಇಸ್ರಯೇಲಿನ ಮನೆತನವನ್ನು ಧಿಕ್ಕರಿಸಿದ ಇವನ ತಲೆಯನ್ನು ಗುರುತು ಹಚ್ಚಲಿ; ಇವನೇ ಅಲ್ಲವೆ ಆ ಆಕಿಯೋರನನ್ನು ಮರಣದಂಡನೆಗೆ ಗುರಿಯಾದವನಂತೆ ನಮ್ಮ ಬಳಿಗೆ ಕಳುಹಿಸಿದ್ದು?" ಎಂದು ಹೇಳಿದಳು. 6ಅಂತೆಯೇ ಜನರು ಆಕಿಯೋರನನ್ನು ಉಜ್ಜೀಯನ ಮನೆಯಿಂದ ಕರೆತಂದರು. ಅಲ್ಲಿ ನಿಂತಿದ್ದವರಲ್ಲಿ ಒಬ್ಬನು ಹೊಲೊಫರ್ನೆಸನ ತಲೆಯನ್ನು ಹಿಡಿದುಕೊಂಡಿರುವುದನ್ನು ಆಕಿಯೋರನು ಕಂಡದ್ದೇ, ಅವನು ಮೂರ್ಛೆ ಹೋದವನಂತೆ ಅಧೋಮುಖವಾಗಿ ನೆಲಕ್ಕೆಬಿದ್ದನು. 7ಜನರು ಅವನನ್ನು ಮೇಲಕ್ಕೆತ್ತಿದರು. ತಕ್ಷಣ ಅವನು ಜೂಡಿತಳ ಕಾಲುಗಳಿಗೆ ಸಾಷ್ಟಾಂಗವೆರಗಿ ಹೀಗೆಂದನು:
"ಶುಭವಾಗಲಿ ನಿನಗೆ ಜುದೇಯದ
ಮನೆಗಳಲ್ಲೆಲ್ಲ, ಸಕಲ ರಾಷ್ಟ್ರಗಳಲ್ಲೆಲ್ಲ !
ಭಯದಿಂದ ನಡುಗುವರು ನಿನ್ನ ನಾಮವನು
ಕೇಳುವವರೆಲ್ಲ!"

8 "ಕಳೆದ ಕೆಲವು ದಿನಗಳಲ್ಲಿ ನೀನು ಮಾಡಿದ್ದೆಲ್ಲವನ್ನು ಈಗ ಹೇಳು," ಎಂದನು. ಜನರು ಸುತ್ತುವರಿದಿರಲು, ಬೆಥೂಲಿಯವನ್ನು ಬಿಟ್ಟುಹೋದ ದಿನದಿಂದ ಅಂದಿನವರೆಗೆ ಜೂಡಿತಳು ಮಾಡಿದ್ದೆಲ್ಲವನ್ನು ವಿವರಿಸಿದಳು. 9ಎಲ್ಲವನ್ನು ಹೇಳಿ ಮುಗಿಸಿದಾಗ, ಜನರೆಲ್ಲರು ಉಚ್ಚಸ್ವರದಿಂದ ಜಯಕಾರ ಮಾಡಿದರು. ಅವರ ಘೋಷಣೆ ಪಟ್ಟಣದಲ್ಲೆಲ್ಲಾ ಪ್ರತಿಧ್ವನಿಸಿತು. 10ಇಸ್ರಯೇಲಿನ ದೇವರು ಮಾಡಿದ ಕಾರ್ಯಗಳನ್ನು ಗಮನಿಸಿದ ಆಕಿಯೋರನು ಅವರ ದೇವರಲ್ಲಿ ಶ್ರದ್ಧೆಯಿಂದ ವಿಶ್ವಾಸವಿರಿಸಿದನು. ಸುನ್ನತಿ ಮಾಡಿಸಿಕೊಂಡು ಇಸ್ರಯೇಲರ ಮನೆತನಕ್ಕೆ ಸೇರ್ಪಡೆಯಾದನು.

### ಹೊಲೊಫರ್ನೆಸನ ಪಾಳೆಯದಲ್ಲಿ ದಿಗ್ಭ್ರಮೆ

11 ಬೆಳಗಾದಾಗ ಜನರು ಹೊಲೊಫರ್ನೆಸನ ತಲೆಯನ್ನು ಕೋಟೆಯ ಗೋಡೆಯ ಮೇಲೆ ತೂಗುಹಾಕಿದರು. ಪ್ರತಿಯೊಬ್ಬನೂ ತನ್ನ ಆಯುಧಗಳನ್ನು ತೆಗೆದುಕೊಂಡನು. ಎಲ್ಲರು ಗುಂಪುಗುಂಪಾಗಿ ಬೆಟ್ಟದ ಇಳಿಜಾರಿನ ಕಡೆ ನಡೆದರು. 12ಇದನ್ನು ಕಂಡ ಅಸ್ಸೀರಿಯರು ತಮ್ಮ ದಳಾಧಿಕಾರಿಗಳಿಗೆ ಸಮಾಚಾರವನ್ನು ತಕ್ಷಣ ತಿಳಿಸಿದರು. ದಳಾಧಿಕಾರಿಗಳು ದಂಡ ನಾಯಕರಿಗೂ ಸಹಸ್ರಾಧಿಪತಿಗಳಿಗೂ ತಿಳಿಸಿದರು. 13ದಂಡನಾಯಕರು ಹೊಲೊಫರ್ನೆಸನ ಡೇರೆಗೆ ಓಡಿಹೋಗಿ ಮೇಳ್ವಿಚಾರಕನನ್ನು ಕಂಡು, “ಒಡೆಯನನ್ನು ಎಬ್ಬಿಸು; ಈ ಗುಲಾಮರು ನಮ್ಮ ಮೇಲೆ ಮುತ್ತಿಗೆ ಹಾಕಲು ಬಂದಿಳಿದಿದ್ದಾರೆ. ಅವರಲ್ಲಿ ಕಟ್ಟ ಕಡೆಯವನೂ ಅಳಿಯಬೇಕೆಂದೇ ಹೀಗಾಗಿರಬೇಕು,” ಎಂದರು. 14ಆಗ ಬಗೋವನು ಒಳಗೆ ಹೋಗಿ ಡೇರೆಯ ಮಧ್ಯೆ ಇದ್ದ ತೆರೆಯನ್ನು ಎಳೆದು ನೋಡಿದನು. ಹೊಲೊಫರ್ನೆಸ್ ಜೂಡಿತಳೊಂದಿಗೆ ಮಲಗಿರಬೇಕೆಂದು ಅವನು ಊಹಿಸಿದ್ದನು. 15ಆದರೆ ಯಾರ ಸುಳಿವೂ ಇಲ್ಲದಿರಲು ತೆರೆಯನ್ನು ಸರಿಯಾಗಿ ಎಳೆದು ಹೊಲೊಫರ್ನೆಸನ ಮಲಗುವ ಕೋಣೆಗೆ ಹೋದನು. ಅಲ್ಲಿ ಬಾಗಿಲ ಬಳಿ ತಲೆಯಿಲ್ಲದೆ ಬಿದ್ದಿದ್ದ ಹೊಲೊಫರ್ನೆಸನ ಮುಂಡವನ್ನು ಕಂಡನು. 16ತಕ್ಷಣವೇ ಆರ್ಭಟಿಸುತ್ತಾ ಕೂಗಿ ಕಣ್ಣೀರಿಟ್ಟು, ಕಿರಿಚಾಡುತ್ತಾ, ತನ್ನ ಬಟ್ಟೆಗಳನ್ನು ಹರಿದುಕೊಂಡನು. 17ಅನಂತರ ಜೂಡಿತಳ ಡೇರೆಗೆ ಹೋಗಿ ನೋಡುವಾಗ ಅಲ್ಲಿ ಅವಳೂ ಇಲ್ಲವೆಂದು ತಿಳಿಯಿತು. 18ಆಗ ಹೊರಗಡೆ ನಿಂತಿದ್ದ ಜನರ ಬಳಿಗೆ ಕೂಗುತ್ತಾ ಬಂದು, “ಗುಲಾಮರು ದಂಗೆಯೆದ್ದಿದ್ದಾರೆ; ಒಬ್ಬ ಹಿಬ್ರು ಮಹಿಳೆ ನೆಬೂಕದ್ನೆಚ್ಚರನ ವಂಶಕ್ಕೆ ಮಾನಭಂಗ ಮಾಡಿದ್ದಾಳೆ; ಹೊಲೊಫರ್ನೆಸ್ ತಲೆಯಿಲ್ಲದೆ ನೆಲದ ಮೇಲೆ ಬಿದ್ದಿದ್ದಾನೆ,” ಎಂದು ಅಬ್ಬರಿಸಿದನು. 19ಇದನ್ನು ಕೇಳಿದ ಅಸ್ಸೀರಿಯರ ಸೈನ್ಯದ ದಳಪತಿಗಳೆಲ್ಲ ತಲ್ಲಣಗೊಂಡು ತಮ್ಮ ಮೇಲ್ವಸ್ತ್ರಗಳನ್ನು ಹರಿದುಕೊಂಡರು. ಪಾಳೆಯದಲ್ಲೆಲ್ಲ ಕೂಗಾಟ, ಚೀರಾಟ ಪ್ರತಿಧ್ವನಿಸಿತು.

### ಇಸ್ರಯೇಲರ ವಿಜಯ

**15** ಈ ಸುದ್ದಿಯನ್ನು ಕೇಳಿದ ಡೇರೆಯಲ್ಲಿನ ಜನರೆಲ್ಲ ಪೆಚ್ಚಾದರು. 2ದಿಗ್ಭ್ರಮೆಗೊಂಡು ನಡುಗುತ್ತಾ ಬಯಲು ಬೆಟ್ಟ ಎನ್ನದೆ ಎಲ್ಲಾಕಡೆ ದಿಕ್ಕಾಪಾಲಾಗಿ ಓಡಿ ಹೋದರು. ಎಲ್ಲೂ ಇಬ್ಬರು ಜೊತೆಯಲ್ಲಿ ಇರುವುದು ಕಂಡುಬರಲಿಲ್ಲ. ಎಲ್ಲರೂ ಕಾಲುಕಿತ್ತಿದ್ದರು. 3ಹಗಲಿರುಳು ಬೆಥೂಲಿಯದ ಸುತ್ತಲೂ ಶಸ್ತ್ರಧಾರಿಗಳಾಗಿ ಬೆಟ್ಟದಲ್ಲಿ ಪಹರೆಯಿದ್ದವರು ಸಹ ಓಡಲಾರಂಭಿಸಿದರು. ಆಗ ಇಸ್ರಯೇಲರು ಅವರನ್ನು ಬೆನ್ನಟ್ಟಿದರು. 4ಇಸ್ರಯೇಲ್ ಪ್ರಾಂತ್ಯಕ್ಕೆಲ್ಲಾ ಅಂದರೆ, ಬೆತೊಸ್ತಾಯಿಮ್, ಬೆಬಾಯಿ, ಚೋಬ, ಕೋಲ ಮುಂತಾದ ಕಡೆಗಳಲ್ಲಿದ್ದ ಇಸ್ರಯೇಲರೆಲ್ಲರಿಗೂ ಉಜ್ಜೀಯನು ಈ ಸಮಾಚಾರವನ್ನು ತಿಳಿಸಿ, ಅವರು ಶತ್ರುಗಳ ಮೇಲೆ ಬಿದ್ದು ಅವರನ್ನು ಮುಗಿಸಿಬಿಡಬೇಕೆಂದು ಒತ್ತಾಯಿಸಲು ದೂತರನ್ನು ಕಳುಹಿಸಿದನು. 5ಇಸ್ರಯೇಲರು ಈ ಸುದ್ದಿಯನ್ನು ಕೇಳಿದ ತಕ್ಷಣ, ಒಮ್ಮೆಗೆ ಶತ್ರುಗಳ ಮೇಲೆ ಬಿದ್ದರು. ಚೋಬದ ದಾರಿಯಲ್ಲಿದ್ದವರನ್ನೆಲ್ಲ ಕೊಂದುಹಾಕಿದರು. ಜೆರುಸಲೇಮಿನ ಜನರು ಹಾಗು ಗುಡ್ಡಗಾಡಿನ ಜುದೇಯದ ಜನರು ಶತ್ರುಪಾಳೆಯದಲ್ಲಿ ನಡೆದ ಸಂಗತಿಗಳನ್ನು ಕುರಿತು ಕೇಳಿದ್ದೇ, ಇಸ್ರಯೇಲರೊಂದಿಗೆ ಒಟ್ಟಾಗಿ ಸೇರಿ ಯುದ್ಧಮಾಡಿದರು. ಅನಂತರ ಗಿಲ್ಯಾದ್ ಮತ್ತು ಗಲಿಲೇಯದ ಜನರು ಬಯಲಿನಲ್ಲಿದ್ದ ಅಸ್ಸೀರಿಯದ ಮೇಲೆ ಎರಗಿ ಅವರಿಗೆ ಘೋರವಾದ ನಷ್ಟವನ್ನು ಉಂಟುಮಾಡಿದರು. ಶತ್ರುಗಳು ಅವರನ್ನು ದಮಸ್ಕಸ್ ಪ್ರಾಂತ್ಯದವರೆಗೆ ಬೆನ್ನಟ್ಟಿದರು. 6ಬೆಥೂಲಿಯದ ನಿವಾಸಿಗಳು ಅಸ್ಸೀರಿಯದ ಪಾಳೆಯವನ್ನು ಹೊಕ್ಕು ಅಲ್ಲಿ ಇದ್ದುದನ್ನೆಲ್ಲಾ ಕೊಳ್ಳೆಹೊಡೆದರು. 7ಅವರು ಬಿಟ್ಟದ್ದನ್ನು ಇಸ್ರಯೇಲರು ಹಿಂದಿರುಗುವಾಗ ದೋಚಿಕೊಂಡರು. ಶತ್ರುಗಳ ಸರಕು ಸರಂಜಾಮುಗಳು ಯಥೇಚ್ಛವಾಗಿದ್ದುದರಿಂದ ಗುಡ್ಡಗಾಡಿನ ಊರುಕೇರಿಗಳವರು ಹಾಗು ಬಯಲಿನ ನಿವಾಸಿಗಳು ಸಾಕಷ್ಟು ಲೂಟಿಯನ್ನು ತೆಗೆದುಕೊಂಡರು.

## ವಿಜಯೋತ್ಸವ

8 ಜೆರುಸಲೇಮಿನಲ್ಲಿದ್ದ ಪ್ರಧಾನ ಯಾಜಕ ಯೋವಾಕಿಮನು ಹಾಗು ಇಸ್ರಯೇಲಿನ ಸಭಾ ಸದಸ್ಯರು, ಸರ್ವೇಶ್ವರಸ್ವಾಮಿ ತಮ್ಮ ಜನರಿಗೆ ತೋರಿದ ಮಹಾಕೃಪೆಯನ್ನು ಕೊಂಡಾಡಿ ಜೂಡಿತಳನ್ನು ಅಭಿನಂದಿಸಲು ಬಂದರು.

9 ಅವಳ ಮನೆಗೆ ಎಲ್ಲರೂ ಬಂದು ಸೇರಿ ಈ ಪರಿ ಒಕ್ಕೊರಲಿನಿಂದ ಸ್ತುತಿಹಾಡಿದರು;

"ನೀನೇ ಜೆರುಸಲೇಮಿನ ಮಹಿಮೆ
ನೀನೇ ಇಸ್ರಯೇಲಿನ ಗರಿಮೆ
ನೀನೇ ನಮ್ಮ ಜನಾಂಗದ ಹಿರಿಮೆ.
10 ನಿನ್ನ ಕೈಯಿಂದಲೇ ಮಾಡಿರುವೆ ಇದನ್ನೆಲ್ಲ
ಸಲ್ಲುವುದು ಘನತೆ ನಿನಗೆ ಇಸ್ರಯೇಲಿನಲ್ಲೆಲ್ಲಾ.
ಮೆಚ್ಚಿಹನು ಪರಮನು ನೀ ಮಾಡಿದ್ದುದನ್ನೆಲ್ಲ
ಸರ್ವಶಕ್ತ ಸರ್ವೇಶ್ವರನ ಆಶೀರ್ವಾದ ಸಕಲ
ನಿನಗೆ ಲಭಿಸಲಿ ಮುಂದಿನ ದಿನಗಳಲ್ಲೆಲ್ಲಾ."
ಜನರೆಲ್ಲರು 'ಆಮೆನ್' ಎಂದು ಘೋಷಿಸಿದರು.

11 ಜನರು ಪಾಳೆಯವನ್ನು ಮೂವತ್ತು ದಿನ ಲೂಟಿಮಾಡಿದರು. ಹೊಲೊಫರ್ನೆಸನ ಡೇರೆಯನ್ನು, ಅವನ ಬೆಳ್ಳಿಯ ತಟ್ಟೆ, ಹೊಗೆಬತ್ತಿ, ಪಾನಪಾತ್ರೆ, ಪೀಠೋಪಕರಣ ಇವುಗಳನ್ನೆಲ್ಲ ಜೂಡಿತಳಿಗೆ ಕೊಟ್ಟರು. ಜೂಡಿತ್ ತನ್ನ ಹೇಸರ ಗತ್ತೆಯ ಮೇಲೆ ಕೆಲವು ಸರಕುಗಳನ್ನು ಹೊರಿಸಿದಳು. ತನ್ನ ಬಂಡಿಗಳನ್ನೆಲ್ಲ ತರಿಸಿ ಮಿಕ್ಕುಳಿದ ಸಾಮಾನುಗಳನ್ನು ಅವುಗಳಲ್ಲಿ ತುಂಬಿಸಿದಳು.
12ಇಸ್ರಯೇಲಿನ ಮಹಿಳೆಯರೆಲ್ಲರು ಅವಳನ್ನು ಕಾಣಲು ತ್ವರೆಯಿಂದ ಬಂದು ಅವಳ ಗೌರವಾರ್ಥ ನೃತ್ಯವೃಂದವನ್ನು ಏರ್ಪಡಿಸಿದರು. ಜೂಡಿತಳು ದ್ರಾಕ್ಷಿಯ ಎಲೆಯ ಗುಚ್ಛಗಳನ್ನು ತೆಗೆದುಕೊಂಡು ತನ್ನ ಜೊತೆಯಲ್ಲಿ ಬರುತ್ತಿದ್ದ ಮಹಿಳೆಯರಿಗೆ ಹಂಚಿದಳು.
13ಓಲಿವ್ ಎಲೆಗಳ ಮುಕುಟಗಳನ್ನು ತಾನೂ ತನ್ನ ಸಂಗಡವಿದ್ದ ಮಹಿಳೆಯರೂ ಧರಿಸಿಕೊಂಡರು. ಮೆರವಣಿಗೆಯ ಮುಂದಾಳಾಗಿ ಜೂಡಿತ್ ಇರಲಾಗಿ, ಇತರ ಹೆಂಗಸರು ಅವಳ ಹಿಂದೆ ನರ್ತಿಸುತ್ತಾ ನಡೆದರು. ಇಸ್ರಯೇಲಿನ ಪುರುಷರೆಲ್ಲ ಆಯುಧಗಳನ್ನು ತೆಗೆದುಕೊಂಡು, ಮಾಲೆಗಳನ್ನು ಧರಿಸಿಕೊಂಡು, ಅವರ ಹಿಂದೆ ಹಾಡುತ್ತಾ ನಡೆದರು.
14ಇಸ್ರಯೇಲಿನವರೆಲ್ಲರು ತನ್ನ ಸುತ್ತ ಇರಲು, ಜೂಡಿತಳು ಹರ್ಷೋದ್ಗಾರದಿಂದ ಕೃತಜ್ಞತಾಗೀತೆಯನ್ನು ಹಾಡಲಾರಂಭಿಸಿದಳು. ಜನರೆಲ್ಲ ಅವಳೊಂದಿಗೆ ಧ್ವನಿಗೂಡಿಸಿ ಈ ಪರಿ ಹಾಡಿದರು.

## ಜೂಡಿತಳ ಸ್ತುತಿಗೀತೆ

**16** ವೀಣೆಯನು ನುಡಿಸುತ, ಗೀತೆಯ
ಹಾಡಿರಿ ನನ್ನ ದೇವನಿಗೆ
ಝುಲ್ಲರಿ ಬಾರಿಸಿ, ಸ್ತುತಿಮಾಡಿರಿ
ಸರ್ವೇಶ್ವರನಿಗೆ
ಕೀರ್ತನೆಗಳನು, ಗೀತೆಗಳನು ಹಾಡಿರಿ
ಆ ಪರಮನಿಗೆ
ಆತನ ನಾಮಸ್ತುತಿ ಮಾಡುತ, ಪ್ರಾರ್ಥನೆ
ಸಲ್ಲಿಸಿರಿ ಆತನಿಗೆ.
2 ಯೋಧಪಂಕ್ತಿಗಳನು ಧ್ವಂಸಮಾಡುವ
ಸರ್ವೇಶ್ವರನೆ
ಬಾಧಕರ ಕೈಯಿಂದ ನನ್ನನ್ನು ತಪ್ಪಿಸಲೆಂದೆ
ಗುಡಾರವನ್ನೆಬ್ಬಿಸಿದ ತನ್ನ ಜನರ ಮಧ್ಯೆ.

3 ಉತ್ತರದ ಗುಡ್ಡಗಾಡುಗಳಿಂದ ಇಳಿದರು
ಅಸ್ಸೀರಿಯರು
ಅವರೊಡನೆ ಬಂದ ಸೇನೆಗಳೋ
ಸಹಸ್ರಾರು.
ಅಡ್ಡಗಟ್ಟಿದರಾ ಯೋಧರು ಕಣಿವೆಯ
ಹಾದಿಗಳನು.
ಕುದುರೆಗಳು ಆವರಿಸಿದವು
ಗುಡ್ಡಗಾಡುಗಳನು.
4 'ಬೆಂಕಿಗೆ ಆಹುತಿಯಾಗಿಸುವೆ ನಿನ್ನ ನಾಡನು
ಕತ್ತಿಗೆ ತುತ್ತಾಗಿಸುವೆ ನಿನ್ನ ಯುವಕರನು
ನೆಲಕ್ಕಪ್ಪಳಿಸುವೆ ನಿನ್ನ ಹಸುಳೆಗಳನು
ಮೃಗಗಳ ಬಾಯಿಗೆ ಹಾಕುವೆ ನಿನ್ನ
ಪುಟಾಣಿಗಳನು
ಸೆರೆಹಿಡಿಯುವೆ ನಿನ್ನ ಯುವತಿಯರನು'
ಈ ಪರಿ ಬೆದರಿಕೆ ಒಡ್ಡಿದನಾ
ಅಸ್ಸೀರಿಯನು.
5 ಆದರೆ ಸರ್ವಶಕ್ತ ಸರ್ವೇಶ್ವರನು
ಒಬ್ಬ ಮಹಿಳೆಯ ಕೈಯಿಂದಲೇ,
ಸೋಲಿಸಿದನವರನು.
6 ಅವರ ವೀರನಾಯಕ ಪತನವಾದುದು
ಯುವಕರ ಕೈಯಿಂದಲ್ಲ
ಅವನು ಹತನಾದುದು
ಸೂರ್ಯದೇವತೆಯ ಕುವರರಿಂದಲ್ಲ
ಘನರಾಕ್ಷಸನಾದವನೂ ಮಾಡಲಿಲ್ಲ
ಅವರ ಮೇಲೆ ಆಕ್ರಮಣ.
ಆದರೆ ಮೆರಾರಿಯ ಕುವರಿಯಿಂದ
ನಿರಾಯುಧಕಳಾದ
ಜೂಡಿತಳ ಮುಖದ ಬೆಡಗು
ಬಿನ್ನಾಣದಿಂದ ಪತನನಾದ !
7 ಇಸ್ರಯೇಲಿನಲಿ ದೀನದಲಿತರನು
ಉದ್ಧರಿಸಲೆಂದು
ಬದಿಗಿಟ್ಟಳವಳು ತನ್ನ ವಿಧವಾವಸ್ತ್ರಗಳನು
ಪರಿಮಳ ತೈಲದಿಂದ ಅಭ್ಯಂಗಿಸಿದಳು ತನ್ನ
ಮೊಗವನು.
8 ಆತನನು ವಂಚಿಸಲೆಂದೇ ಧರಿಸಿದಳು
ಉತ್ತಮ ಉಡಿಗೆಯನು
ರುಮಾಲಿನಿಂದ ಕಟ್ಟಿಕೊಂಡಳು ತನ್ನ
ಕೇಶರಾಶಿಯನು.
9 ಅವಳ ಪಾದರಕ್ಷೆ ಆಕರ್ಷಿಸಿತು ಆತನ
ಕಣ್ಣನು

ಅವಳ ಬೆಡಗು ಸೂರೆಮಾಡಿತು ಆತನ
ಮನಸ್ಸನು
ಅವಳ ಕತ್ತಿ ಇರಿಯಿತು ಆತನ
ಕುತ್ತಿಗೆಯನು.
10 ಪರ್ಷಿಯನ್ನರು ನಡುಗಿದರು ಅವಳ ಕೆಚ್ಚಿಗೆ
ಮಿದ್ಯಾನರು ಬೆದರಿದರು ಅವಳ
ಶೌರ್ಯಕೆ.
11 ತಲ್ಲಣಗೊಂಡರೆಲ್ಲರು, ನನ್ನ ದಲಿತರು
ಕಹಳೆಮೊಳಗಿದಾಗ
ದಿಗ್ಭ್ರಮೆಗೊಂಡರು, ನನ್ನ ದುರ್ಬಲ
ಜನರು ಕೂಗಿದಾಗ
ಹಿಂಜರಿದರೆಲ್ಲರು, ನನ್ನವರೆಲ್ಲರು
ಆರ್ಭಟಿಸಿದಾಗ.
12 ಕೇವಲ ದಾಸಿಯರ ಮಕ್ಕಳು
ಬೆನ್ನಟ್ಟಿದರವರನು
ದ್ರೋಹಿಗಳ ಸಂತಾನವೋ ಎಂಬಂತೆ
ಇರಿದರವರನು
ಸರ್ವೇಶ್ವರನ ಕಾಳಗದಲಿ ಹತಮಾಡಿದರು
ಎಲ್ಲರನು.
13 ಹಾಡುವೆನು ನಾ ದೇವನಿಗೆ ನೂತನ
ಕೀರ್ತನೆಯನು:
ಸರ್ವೇಶ್ವರಾ, ಭಗವಂತ, ಮಹಿಮಾವಂತ
ನೀನು
ಮಹಾಶಕ್ತಿಶಾಲಿ, ಅಜೇಯನು ನೀನು,
14 ಸೃಷ್ಟಿಸಮಸ್ತವು ಸೇವೆಸಲ್ಲಿಸಲಿ ನಿನಗೆ
ಸೃಷ್ಟಿಯಾಯಿತೆಲ್ಲಾ ನಿನ್ನ ನುಡಿಮಾತ್ರಕೆ
ಒಟ್ಟುಗೂಡಿದವೆಲ್ಲವು ನಿನ್ನ ಉಸಿರಾಟಕೆ
ಪ್ರತಿಭಟಿಸುವವರಾರೂ ಇಲ್ಲ ನಿನ್ನ
ಮಾತಿಗೆ.
15 ಬೆಟ್ಟಗಳು ಕದಲಿ ಸಾಗರದೊಳು
ಮುಳುಗಿದರೂ
ಬಂಡೆಗಳು ಮೇಣದಂತೆ ಕರಗಿಹೋದರೂ
ದಯೆತೋರುವೆ ನೀನು
ನಿನಗಂಜುವವರೆಲ್ಲರಿಗೂ.
16 ನನ್ನ ಜನಾಂಗಕೆ ವಿರುದ್ಧ ನಿಲ್ಲುವವರಿಗೆ
ಧಿಕ್ಕಾರ !
ತೀರ್ಪಿನ ದಿನದಲಿ ದಂಡಿಸುವನವರನು
ಸರ್ವಶಕ್ತ ಸರ್ವೇಶ್ವರ.
17 ಕಬಳಿಸುವುದು ಅವರ ದೇಹವನು
ಅಗ್ನಿ ಹಾಗೂ ಕ್ರಿಮಿಕೀಟ

ವೇದನೆಯಿಂದ ರೋಧಿಸುವರವರು
ಅನವರತ.

**ಕೀರ್ತಿಶೇಷಳಾದ ಜೂಡಿತ್**

18 ಜೆರುಸಲೇಮನ್ನು ಸೇರಿದಾಗ ಆ ಜನರೆಲ್ಲರು ದೇವರ ಸನ್ನಿಧಿಯಲ್ಲಿ ಸಾಷ್ಟಾಂಗ ಎರಗಿದರು. ಅವರು ಮಡಿ ಮಾಡಿಕೊಂಡು ಕಾಣಿಕೆ, ನೈವೇದ್ಯ, ದಹನಬಲಿಗಳೆಲ್ಲವನ್ನು ಅರ್ಪಿಸಿದರು. 19ಜನರು ತನಗಿತ್ತ ಹೊಲೊಫರ್ನೆಸನ ಸ್ವತ್ತನ್ನೂ ತಾನೇ ಬಿಚ್ಚಿತಂದಿದ್ದ ಮೇಲು ಚಪ್ಪರದ ಸಾಮಾನುಗಳನ್ನೂ ಜೂಡಿತಳು ಅರ್ಪಿಸಿ, ತನ್ನ ಹರಕೆಯನ್ನು ತೀರಿಸಿದಳು. 20ಮೂರು ತಿಂಗಳವರೆಗೆ ಜನರು ಜೆರುಸಲೇಮಿನ ಮಹಾದೇವಾಲಯದ ಮುಂದೆ ಆನಂದದಿಂದ ವಿಜಯೋತ್ಸವ ಕೊಂಡಾಡಿದರು. ಜೂಡಿತಳು ಸಹ ಈ ಉತ್ಸವದಲ್ಲಿ ಭಾಗವಹಿಸಿದಳು.

21 ಇದಾದನಂತರ ಪ್ರತಿಯೊಬ್ಬರೂ ಮನೆಗೆ ಹಿಂದಿರುಗಿದರು. ಜೂಡಿತಳು ಬೆಥೂಲಿಯಕ್ಕೆ ಹೋಗಿ ತನ್ನ ಸ್ವಂತ ಆಸ್ತಿಯಿಂದಲೇ ಜೀವನ ನಡೆಸಿದಳು. ಜೀವಮಾನಪರ್ಯಂತ ನಾಡಿನಲ್ಲಿ ಎಲ್ಲ ಅವಳ ಕೀರ್ತಿ ಹರಡಿತು. 22ಅವಳನ್ನು ವರಿಸುವಂಥವರು ಅನೇಕರಿದ್ದರು. ಆದರೂ, ಅವಳ ಯಜಮಾನ ಮನಸ್ಸೆ ಸತ್ತು ಪಿತೃಗಳೊಂದಿಗೆ ಸೇರಿಕೊಂಡಿದ್ದರಿಂದ, ಯಾವ ಪುರುಷನ ಬಯಕೆಗೂ ಆಕೆ ಶರಣಾಗಲಿಲ್ಲ. 23ತನ್ನ ಗಂಡನ ಮನೆಯಲ್ಲಿದ್ದಷ್ಟು ಕಾಲವೂ ಹೆಚ್ಚು ಹೆಚ್ಚು ಗೌರವವನ್ನು ಗಳಿಸಿಕೊಂಡಳು. ತನ್ನ ದಾಸಿಗೆ ಬಿಡುಗಡೆಯಿತ್ತಳು. ಜೂಡಿತಳು ಬದುಕಿದ್ದು 105 ವರ್ಷ. ಅನಂತರ ಬೆಥೂಲಿಯದಲ್ಲಿ ಸ್ವರ್ಗಸ್ಥಳಾದಳು. ಆಕೆಯ ಯಜಮಾನ ಮನಸ್ಸೆಯ ಗುಹೆಯಲ್ಲೇ ಅವಳನ್ನು ಸಮಾಧಿ ಮಾಡಲಾಯಿತು. 24ಏಳು ದಿನವಿಡೀ ಇಸ್ರಯೇಲ್ ಮನೆತನ ಶೋಕಾಚರಣೆಯಲ್ಲಿತ್ತು. ಸಾಯುವ ಮುನ್ನ ಆಕೆ ತನ್ನ ಆಸ್ತಿಯನ್ನು ತನ್ನ ಹಾಗೂ ಮನಸ್ಸೆಯ ಬಂಧುಬಳಗದವರಿಗೆ ಹಂಚಿಕೊಟ್ಟಿದ್ದಳು.

25 ಜೂಡಿತಳ ಉಳಿದ ಜೀವಮಾನಕಾಲದಲ್ಲಾಗಲೀ ಅನಂತರ ಬಹುಕಾಲದವರೆಗಾಗಲೀ ಇಸ್ರಯೇಲರ ಗೋಜಿಗೆ ಯಾರೂ ಬರಲಿಲ್ಲ.